ಪಂಚಮ

ಸಂಚಿಕೆ : 11
ಸಂಪುಟ 9-12
ಮೇ-ಜೂನ್ 1987

ನಿರಂತರ ಭೂ ಹೋರಾಟಕ್ಕೆ ಜಯ

ಮೆದಿಕಿನಾಳ ನಡೆದು ಬಂದ ದಾರಿ

ಮೆದಿಕಿನಾಳ ಗ್ರಾಮ: ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲೂಕಿನ ಮಸ್ಕಿ ಹೋಬಳಿ ಕೇಂದ್ರದಿಂದ 12ಕಿ.ಮಿ. ದೂರದಲ್ಲಿವೆ. ಈ ಗ್ರಾಮದಲ್ಲಿ ಸುಮಾರು 500 ಕುಟುಂಬಗಳಿದ್ದು ಇವುಗಳ ಪೈಕಿ ಶೇಕಡ ಇಪ್ಪತ್ತು ಕುಟುಂಬಗಳವರು ಸಣ್ಣ ರೈತರಿದ್ದಾರೆ. ಹಾಗೂ ಶೇ 80ರಷ್ಟು ಕುಟುಂಬಗಳವರು ಭೂಹೀನರು.50ಕುಟುಂಬಗಳವರು ಒಡ್ಡರು, ಬೇಡರು ಹಾಗೂ ಕೊರವರು, ಭೂಹೀನರ ಪಟ್ಟಿಗೆ ಸೇರಿರುತ್ತಾರೆ, ಪರಿಶಿಷ್ಟ ವರ್ಗ ಪರಿಶಿಷ್ಟ ಜಾತಿ ಸೇರುತ್ತಾರೆ. ಸುಮಾರು 130ಎಕರೆಗಿಂತಲೂ ಹೆಚ್ಚು ಭೂಮಿ ನೀರಾವರಿ ಸೌಕರ್ಯವಿರುವ ಮಹೇಂದ್ರಬಾಬು ಎಂಬುವರು ಇಲ್ಲಿನ ದೊಡ್ಡ ಭೂಮಾಲೀಕರು.

ಸುಮಾರು 30ಕ್ಕಿಂತಲೂ ಹೆಚ್ಚು ಮಂದಿ ಜೀತಗಾರರು ವಂಶ ಪಾರಂಪರ್ಯವಾಗಿ ಜೀತ ಮಾಡುತ್ತಿದ್ದರು, ಸರ್ಕಾರದ ಜೀತ ವಿಮುಕ್ತಿ ಕಾನೂನಿಗೆ ಸಾಕ್ಷಿಗಳಾಗಿ ಇವರೆಲ್ಲಾ ಜೀತ ವಿಮುಕ್ತರಾಗಿ, ಅರೆ ಹೊಟ್ಟೆ ಗಂಜಿಗೂ ಇಲ್ಲದೆ ಬೀದಿ ಪಾಲಾದರು. 30 ಕುಟುಂಬಗಳವರು ಬುಟ್ಟಿ ಹೆಣೆಯುವ ಕಸುಬನ್ನು ನಡೆಸುತ್ತಾರೆ. ಇವರುಗಳು ಹಳ್ಳಕೊಳ್ಳಗಳಿಂದ ಈಚಲು ಬರಲುಗಳನ್ನು ತಂದು ಬುಟ್ಟಿ ಹೆಣೆಯುತ್ತಿದ್ದರು. ಇವರು ಕಸುಬಿನಲ್ಲಿ ಬರಲುಗಳನ್ನು ತರಲು ಕತ್ತೆಗಳು ಸಹಾಯಕವಾಗಿದ್ದವು.

ಇಲ್ಲಿನ ದೊಡ್ಡ ರೈತರು, ಬೀದಿಗಳಲ್ಲಿ ಕತ್ತೆಗಳು ಅಲೆಯುತ್ತವೆ, ಹಾಗೂ ಕಿರುಚುತ್ತವೆ ಎಂಬ ಕಾರಣದಿಂದ ಹರಿತವಾದ ಆಯುಧ



ಆಗಸ್ಟ್ 14

ವಿಷ ಬೆರೆತ ಹೆಂಡದ ವಿರುದ್ಧ

ಆಗಸ್ಟ್ 15ರ ಅದ್ಧೂರಿ ಸ್ವಾತಂತ್ರ್ಯೋತ್ಸವದ ಹಿಂದಿನ ದಿನ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮೊಳಗಿದ ಘೋಷಣೆಗಳು ಇವು. ಅಂದು ಸಾವಿರಾರು ದ.ಸಂ.ಸ. ಕಾರ್ಯಕರ್ತರು ಹೆಗಡೆಯವರ ಹೆಂಡದ ನೀತಿಯನ್ನು ಪ್ರತಿಭಟಿಸಿ ಬೀದಿ ಬೀದಿಗಳಲ್ಲಿ ಮೆರವಣಿಗೆ, ಬಹಿರಂಗ ಸಭೆ ನಡೆಸಿದರು. ವಿಷದ ಹೆಂಡದ ಐದು ಬಾಟ್ಲಿ ಸ್ಯಾಂಪಲ್ಲುಗಳನ್ನು ಮುಖ್ಯ ಮಂತ್ರಿ ಹೆಗಡೆಯವರಿಗೆ ಜಿಲ್ಲಾಧಿಕಾರಿಗಳ ಮೂಲಕ ಕಳುಹಿಸಿ ಕೊಟ್ಟರು.

ಜುಲೈ 4, 5ರಂದು ರಾಯಚೂರಿನಲ್ಲಿ ನಡೆದ ರಾಜ್ಯ ಸಮಿತಿ ಸಭೆಯ ತೀರ್ಮಾನದಂತೆ ಈ ವ್ಯಾಪಕ ಕಾರ್ಯಕ್ರಮ ನಡೆಯಿತು.

ವಿಷದ ಹೆಂಡದ ಮೂಲಕ ಬಡವರನ್ನು ನಿಧಾನವಾಗಿ ಕೊಲ್ಲುತ್ತಾ ಅವರ ಪುಡಿಗಾಸನ್ನೂ ಕಬಳಿಸಿ

(15ನೇ ಪುಟಕ್ಕೆ)

ಗಳಿಂದ ಕತ್ತೆಗಳನ್ನು ಕಡಿಯುತ್ತಿದ್ದರು, ಗಾಯಗೊಂಡ ಕತ್ತೆಗಳು ಮುಂದೆ ಮೂರು ನಾಲ್ಕು ದಿವಸಗಳಲ್ಲೆ ನರಳಿ ಸಾವನ್ನಪ್ಪುತ್ತಿದ್ದವು. ಈ ರೀತಿ ಇವರ ಜೀವನಕ್ಕೆ ಸಂಚಕಾರ ಬಂದು ಇವರು ಹೊಟ್ಟೆಗಿಲ್ಲದೇ ನರಳುವಂತಾಯಿತು.

ಇನ್ನು ಬಿಟ್ಟಿ ಚಾಕರಿ ಎಂದರೆ ಗುಂಡಿ ತೆಗೆದು ಹೆಣ ಹೂಳುವುದು, ಬೀದಿ ಕಸ ಗುಡಿಸುವುದು, ಇವರ ನಿತ್ಯ ಕಸಬು. ಇವರಿಗೆ ಯಾರಾದರೂ ಅರಿವಿದ್ದವರು ಅಲ್ಪ ಸ್ವಲ್ಪ ಹಣ ಕೊಟ್ಟರೆ ಅದೇ ಅವರ ಹೊಟ್ಟೆಪಾಡಿಗೆ ಮಾರ್ಗ ಇಲ್ಲವಾದರೆ ಉಪವಾಸ.

ಜೀತ ವಿಮುಕ್ತರಿಗೆ ಪುನರ್ ವಸತಿ ಕಲ್ಪಿಸಿ ಕೊಡಲು ಸರ್ಕಾರಿ ಅಧಿಕಾರಿಗಳು ಮುಂದಾಗಲಿಲ್ಲ. ದಲಿತರೆಲ್ಲಾ ಹಸಿವಿನಿಂದ ಕಂಗಾಲಾಗಿ ಸಂಕಟಪಡಬೇಕಾಗಿದೆ, ಕನಿಷ್ಟ ಒಪ್ಪತ್ತಿನ ತುತ್ತಿಗೆ ಮಾರ್ಗವಿಲ್ಲದಾಯಿತು, ಇಂತಹ ಕಠೋರ ಸಮಯದಲ್ಲಿ ಬಲಾಢ್ಯರ ಅಕ್ರಮ ಅನ್ಯಾಯಗಳಿಗೆ ಎಡೆ ಇಲ್ಲದಂತಾಯಿತು.

ಭೂಮಾಲೀಕರ ದೌರ್ಜನ್ಯ

ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚುವುದು, ಚಾಕರಿ ಮಾಡದಿರುವವರನ್ನು ಗಿಡಗಳಿಗೆ ಕಟ್ಟಿ ಹಾಕಿ ಚಿತ್ರಹಿಂಸೆ ಕೊಡುವುದು, ಇತ್ಯಾದಿಗಳೊಂದಿಗೆ ಭೂಮಾಲೀಕರು ಸುತ್ತ ನಲವತ್ತು ಹಳ್ಳಿಗಳಿಗೆ ರಾಜರಂತೆ ದರ್ಬಾರು ನಡೆಸಿಕೊಳ್ಳುತ್ತಾ ಬಂದಿರುವರು. ಈ ನಾಡಗೌಡರಿಗೆ ವರ್ಷದ ಆದಾಯವನ್ನು ದಲಿತರು ಕೊಡದೇ ಹೋದಪಕ್ಷದಲ್ಲಿ ಅವರಿಗೆ ಬೆದರಿಕೆ ಹಾಕುವುದು, ಅವರನ್ನು ಬಂದೂಕಿನಿಂದ ಕೊಲೆ ಮಾಡುವುದು, ಇದಕ್ಕೆ ಜೀವಂತ ನಡೆದ ಘೋರವಾದ ಘಟನೆಗಳು ಸಾಕ್ಷಿಯಾಗಿರುತ್ತದೆ.

ಭೂಮಿಗಾಗಿ ಭೂಹೀನರ ದಂಗೆ

ಊರಿನ ಪಕ್ಕದಲ್ಲಿ 30 ವರ್ಷಗಳಿಂದ ಬೀಳು ಬಿದ್ದಿದ್ದ ಕೆರೆ ಅಂಗಳದ 67 ಎಕರೆ 37 ಗುಂಟೆ ಸರ್ಕಾರಿ ಭೂಮಿ ಇತ್ತು. ಮಳೆ ಬಂದರೂಒಂದು ಹನಿ ನೀರು ನಿಲ್ಲುವುದಿಲ್ಲ.ಈ ಕೆರೆಯ ಅಕ್ಕಪಕ್ಕದ ಜಮೀನು ಬೀಳುಬಿದ್ದಿತ್ತು, ಸರ್ವೆ ನಂ. 74:1, 74:2 ಹಾಗೂ 75. ನಿರಂತರವಾಗಿ ಬೇಸರಗೊಂಡ ದಲಿತರು ಈ ಕೆರೆ ಅಂಗಳ ಅನಾಮತ್ತಾಗಿ ತಮ್ಮ ಬದುಕು ಜೀವನಕ್ಕಾಗಿ ಸಾಗುವಳಿ ಮೂಲಕ ಬೇಸಾಯ ಮಾಡಿ ಬದುಕಲು ಮುಂದಾದರು, ಸರ್ಕಾರಕ್ಕೆ ಈ ಭೂಮಿ ತಮಗೆ ಮಂಜೂರು ಮಾಡುವಂತೆ ಅರ್ಜಿಗಳನ್ನು ಅರ್ಪಿಸಿದರು.

ಭೂಮಿ ಕೇಳಿದ್ದಕ್ಕೆ ಜೈಲುವಾಸ

ಆದರೆ ಬಂಡೆಯಂತಹ ಸರ್ಕಾರಕ್ಕೆ ಅನೇಕ ವರ್ಷಗಳ ಕಾಲ ಈ ಅರ್ಜಿಗಳು ಗೋಚರಿಸಲಿಲ್ಲ. ಅರ್ಜಿಗಳು ಕಸದ ಬುಟ್ಟಿಗೆ ಹೋದವು. ಕಚೇರಿಗಳಿಗೆ ದಲಿತರು ಅಲೆದು ಅಲೆದು ಸೊರಗಿದರೇ ಹೊರತು, ಅವರ ಜೀವನದ ಬೆಳಕು ಮಾಡಲಿಲ್ಲ, ಆದಕ್ಕೆ ದಲಿತರು ದ.ಸಂ.ಸ. ಅಡಿಯಲ್ಲೆ ಸಭೆ ಸೇರಿ ದಿನಾಂಕ 16-11-1984ರಂದು ಭೂಮಿಯಲ್ಲಿ ಬಿತ್ತನೆ ಮಾಡುವ ಸಲುವಾಗಿ ಭೂಮಿಯಲ್ಲಿ ಬೇಸಾಯ ಪ್ರಾರಂಭಿಸಿದ್ದರು, ಇದರಿಂದ ಕುಪಿತಗೊಂಡ ಜಾತಿವಾದಿಗಳು ದಲಿತರ ಬಗ್ಗೆ ದೂರುಗಳನ್ನು ನೀಡಿದರು. ಅಧಿಕಾರಿಗಳನ್ನು ದಲಿತರ ವಿರುದ್ಧ ಎತ್ತಿ ಕಟ್ಟಿದರು. ಪೊಲೀಸರು ಪ್ರವೇಶಿಸಿ 37ಜನ ದಲಿತರನ್ನು ಬಂಧಿಸಿ ಅವರ ಮೇಲೆ ಐ.ಪಿ.ಸಿ 147, 144, 145 ಹಾಗೂ 188 ಕಾನೂನುಗಳನ್ನು ಹೇರಿ ಜೈಲಿಗೆ ಐದು ದಿವಸ ಕಾಲ ತಳ್ಳಿದರು, ಮುಂದೆ ದಲಿತರು ಕೋರ್ಟು ಕಚೇರಿಗಳಿಗೆ ಅಲೆಯುವಂತಾಯಿತು. ಇಂದಿಗೂ ಕೋರ್ಟಿನಲ್ಲಿ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ.

ಈ ನಾಡಗೌಡರಿಗೆ ವರ್ಷದ ಆದಾಯವನ್ನು ದಲಿತರು ಕೊಡದೇ ಹೋದ ಪಕ್ಷದಲ್ಲಿ....

ನಂತರ ದಲಿತರು ದಂಗೆ ಎದ್ದು ಸರ್ಕಾರಿ ನೀತಿಯನ್ನು ವಿರೋಧಿಸಿ ದಿನಾಂಕ 25 ಮೇ 85ರಂದು ಮೆದಿಕಿನಾಳ ಗ್ರಾಮದಿಂದ ಲಿಂಗಸುಗೂರು ತಾಲೂಕಿನವರೆಗೆ ಕಾಲ್ನಡಿಗೆ ಜಾಥಾ. ಸಾವಿರಕ್ಕೆ ದಲಿತರು ಭೂಮಿಯನ್ನು ಮಂಜೂರಾತಿ ನೀಡುವಂತೆ ಒತ್ತಾಯಿಸಿದರು, ಇದರಿಂದಲೂ ಸರ್ಕಾರದ ಕಣ್ಣು ಮತ್ತು ಮನಸ್ಸು ದಲಿತರ ಕಡೆ ಹರಿಯಲಿಲ್ಲ.

ಆಮೇಲೆ ದಲಿತರು ಜ್ವಾಲಾಮುಖಿಯಂತೆ ಸಿಡಿದು ಜಿಲ್ಲಾದ್ಯಂತ ಸೈಕಲ್ ಜಾಥಾವನ್ನು ಐದುನೂರಕ್ಕೂ ಹೆಚ್ಚು ಜನ ಕೊಪ್ಪಳದಿಂದ ಸುಮಾರು 180 ಕಿ.ಮಿ. ದೂರವಿರುವ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಸರ್ಕಾರದ ನೀತಿಯನ್ನು ವಿರೋಧಿಸಿ,ಮೆದಿಕಿನಾಳದ ಭೂಹೀನರಿಗೆ ಭೂಮಿಯನ್ನು ಮಂಜೂರು ಮಾಡಬೇಕೆಂದು ಒತ್ತಾಯಿಸಿದಾಗ್ಯೂ ಯಾವುದೇ ಪರಿಹಾರ ಸಿಗಲಿಲ್ಲ. ಇದಕ್ಕೂ ಬಗ್ಗದ ಸರ್ಕಾರ ಮೌನ ತಳೆಯಿತು.

ದಿನಾಂಕ 6-3-86ರಂದು ಮೆದಿಕಿನಾಳ ದಲಿತರಿಗೆ ಭೂಮಿ ಹಂಚಲು ಸರ್ಕಾರವನ್ನು ಒತ್ತಾಯಿಸಿ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕು, ಕಚೇರಿಗಳ ಮುಂದೆ ನಾಲ್ಕು ದಿವಸಗಳ ಧರಣಿ ನಡೆಸಿತು. ದಲಿತರ ಆಕ್ರಂದನ ಅಧಿಕಾರಿಗಳಿಗೆ, ಮಂತ್ರಿ- ಶಾಸಕರಿಗೆ, ಮುಟ್ಟಲಿಲ್ಲ. ಈ ನಂತರ ಮತ್ತೆ 10-2-86 ರಿಂದ 48 ತಾಸುಗಳ ಉಪವಾಸ ಸತ್ಯಾಗ್ರಹ ಮಾಡಿದಾಗ್ಯೂ ಸರ್ಕಾರ ಯಾವುದೇ ತೀರ್ಮಾನಕ್ಕೆ ಬರಲಿಲ್ಲ.

ಮತ್ತೆ ಹಸಿವಿನಿಂದ ಅರಚಿಕೊಂಡು ತಮ್ಮ ಪ್ರತಿಭಟನೆಗೆ ಚಾಲನೆ ಶಕ್ತಿಯಾಗಿ ದಿನಾಂಕ 14-2-86 ರಿಂದ ಈ ಭೂಮಿ ಇಲ್ಲದೇ ತಮಗೆ ಬದುಕಿಲ್ಲ, ಹೊಟ್ಟೆಗೆ ಕೂಳಿಲ್ಲ ಎಂದು ನಂಬಿದ ದಲಿತರು ಸುಮಾರು 386 ದಿವಸ ಭೂಮಿಯಲ್ಲೇ ಧರಣಿ ಕುಳಿತರು.

ಮುಖ್ಯಮಂತ್ರಿಗಳಿಗೆ ಘೇರಾವ್

ರಾಯಚೂರು ಲೋಕಸಭೆ ಮಧ್ಯಂತರ ಚುನಾವಣೆಯ ಪ್ರಚಾರಕ್ಕೆ ರಾಯಚೂರಿಗೆ ಆಗಮಿಸಿದಾಗ ದಲಿತರಿಗೆ ಭೂಮಿ ಕೊಡುವಂತೆ ಮುಖ್ಯಮಂತ್ರಿಗಳಿಗೆ ಸುಮಾರುಎರಡು ಸಾವಿರಕ್ಕೂ ಹೆಚ್ಚು ದಲಿತರು ಮುಖ್ಯಮಂತ್ರಿಗಳಿಗೆ ಘೇರಾವ್ ಮಾಡಿ 'ಮೌಲ್ಯಾಧಾರಿತ ಹೆಗಡೆಯವರೇ ಮೆದಿಕಿನಾಳ ದಲಿತರಿಗೆ ಭೂಮಿ ಕೊಡಿ' ಎಂದು ಘೋಷಣೆಗಳನ್ನು ಕೂಗಿದಾಗ, ಅವರು ನೀಡಿದ ಉತ್ತರ: ದಲಿತರ ಮಕ್ಕಳಿಗಾಗಿ ಮೂರು ಕೋಟಿ ರೂಪಾಯಿ ಹಾಸ್ಟೆಲ್‌ಗಾಗಿ, ಮೀಸಲಾತಿಯಲ್ಲೇ 25 ಪರಸೆಂಟ್ ಏರಿಸಿದ್ದು ಸಾಲದೇ? ಎಂದು ದ.ಸಂ.ಸ. ಕಾರ್ಯಕರ್ತರನ್ನು ಪ್ರಶ್ನಿಸಿದರು. ಪುನಃ 'ಕಾಂಗ್ರೆಸಿಗೆ ಧಿಕ್ಕಾರ ಮೆದಿಕಿನಾಳ ಭೂಹೋರಾಟಕ್ಕೆ ಜಯವಾಗಲೆಂದ ತಕ್ಷಣವೇ ಉತ್ತರ ನೀಡದೆ ತಪ್ಪಿಸಿಕೊಂಡು ಪರಾರಿಯಾದರು. ಕೊನೆಗೆ ರಾಜ್ಯ ಕಂದಾಯ ಕಾರ್ಯದರ್ಶಿ, ಮೆದಿಕಿನಾಳ ದಲಿತರಿಗೆ ದಿನಾಂಕ 17-2-1987 ರಂದು ಮಂಜೂರಾತಿಗಾಗಿ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಿದರು, ಅಲ್ಲಿಯವರೆಗೆ ಮೆದಿಕಿನಾಳ ದಲಿತರ ಭೂಮಿಯಲ್ಲೆ ಧರಣಿ ಸತ್ಯಾಗ್ರಹ 396 ದಿವಸಕ್ಕೆ ಬಂದಿತ್ತು, ಜಿಲ್ಲೆ ಇತಿಹಾಸದಲ್ಲೆ ಮೊದಲ ಬಾರಿ ಯಶಸ್ವಿ ಈ ಮೆದಿಕಿನಾಳ ಭೂ ಹೋರಾಟ.

(16ನೇ ಪುಟಕ್ಕೆ)

ದಸಂಸ ಮುಂದಿನ ಸವಾಲು

ದಿನಾಂಕ 7-8-87 ರಂದು ಮಧ್ಯಾಹ್ನ 3 ಗಂಟೆಗೆ ಬಂಗಾರು ಪೇಟೆ 'ದಸಂಸ' ಸ್ಥಳೀಯ ಶಾಖೆ ಕರಪತ್ರದಲ್ಲಿ ನಮೂದಿಸಿರುವ ಘಟನೆಗಳ ಬಗ್ಗೆ ಪ್ರತಿಭಟನಾ ಮೆರವಣಿಗೆ ಏರ್ಪಡಿಸಲಾಗಿತ್ತು. ಈ ಪ್ರತಿಭಟನಾ ಮೆರವಣಿಗೆ ಎಸ್.ಪಿ. ಓಂಕಾರಯ್ಯನಿಗೆ ನುಂಗಲಾರದ ತುತ್ತಾಯಿತು. ಹೇಗಾದರೂ ಮಾಡಿ ಈ ಮೆರವಣಿಗೆ ನಿಲ್ಲಿಸಲೇಬೇಕು ಎಂದು ಹಟಮಾಡಿದ. ಈ ಸಂದರ್ಭದಲ್ಲಿ ಬಂಗಾರಪೇಟೆ ದಲಿತರ ನಾಯಕರು ಎಂಬ ಲೇಬಲ್ ಹಾಕಿಕೊಂಡು ತಮ್ಮ ದಿನನಿತ್ಯದ ಬದುಕಿಗಾಗಿ ಬಡಜನರಿಂದ ಹಣ ವಸೂಲಿ ಮಾಡಿಕೊಂಡು ಶೋಷಕರಾಗಿರುವ ಪುಲಿಯೆಂದ್ರ, ಮುರಗಯ್ಯ, ಸ್ವಾಮಿಕಣ್ಣು ಎಂ. ನಾರಾಯಣ, ಡಿ. ಬಾಲು ಇನ್ನೂ ಹಲವಾರು ವ್ಯಕ್ತಿಗಳನ್ನು ಕರೆಯಿಸಿ, ಪೊಲೀಸ್ ಠಾಣೆಯಲ್ಲಿ ಮೀಟಿಂಗ್ ನಡೆಸಿ 'ದಸಂಸ' ವಿರುದ್ಧ ಕರಪತ್ರ ಹಾಕಿಸುವುದರ ಮುಖಾಂತರ ತನ್ನ ತರಳೆ ಚಮತ್ಕಾರವನ್ನು ಪ್ರದರ್ಶಿಸಿದ.

ಇದಾದ ನಂತರ ತನ್ನ ಎರಡನೇ ಸುತ್ತಿನ ಒಡೆದು ಆಳುವ ನೀತಿಯನ್ನು ಜಾತಿಯ ಸ್ವರೂಪಕ್ಕೆ ತಿರುಗಿಸಿದ. ಬಂಗಾರುಪೇಟೆಯಲ್ಲಿ ಸುಮಾರು ಜನವಿರುವ ಲಿಂಗಾಯಿತರು, ವ್ಯಾಪಾರಿ ವರ್ಗದವರನ್ನು 'ದಸಂಸ' ವಿರುದ್ಧ ಎತ್ತಿಕಟ್ಟಿದ. ಅದರಂತೆಯೇ ಬಂಗಾರುಪೇಟೆಯಲ್ಲಿರುವ ಹತ್ತು ಹಲವಾರು ಸಂಘಗಳು ದಲಿತರ ಮಾನಸಿಕ ಮತ್ತು ದೈಹಿಕ ಶೋಷಣೆಯನ್ನು ಕನಿಷ್ಠ ಐದು ನಿಮಿಷ ಯೋಚಿಸದ ಈ ಮೂರ್ಖ ಫುಟ್‌ಪಾತ್ ಸಂಘಗಳು 'ದಸಂಸ' ವಿರುದ್ಧ ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿ ಕರಪತ್ರ ತಂದರು.

'ದಸಂಸ' ಮೆರವಣಿಗೆ ಸುಮಾರು ಸಾವಿರಕ್ಕೂ ಹೆಚ್ಚು ಜನ ಪೊಲೀಸರ ದೌರ್ಜನ್ಯದ ವಿರುದ್ಧ, ಭೂಮಾಲಿಕ, ಜಾತಿವಾದಿಗಳು, ಭ್ರಷ್ಟ ರಾಜಕೀಯ ವ್ಯಕ್ತಿಗಳ ಮತ್ತು ಪಕ್ಷಗಳ ವಿರುದ್ಧ ತಮ್ಮ ಆಕ್ರೋಶವನ್ನು ಘೋಷಣೆಗಳ ಮೂಲಕ ಜನತೆಗೆ ತಿಳಿಸುತ್ತಿದ್ದು, ಇಲ್ಲಿನ ತರಳೆ ರಾಜಕೀಯ ವ್ಯಕ್ತಿಗಳಿಗೆ ಜಾತಿವಾದಿಗಳಿಗೆ ಸಹಿಸಲಾರದಾಯಿತು. ಜೊತೆಗೆ ಈ ಹಿಂದೆಯೇ ಎಸ್.ಟಿ. ಓಂಕಾರಯ್ಯ 'ದಸಂಸ'ದ ವಿರುದ್ಧ ಜಾತಿಭಾವನೆ ಮೂಡಿಸಿ ಕರಪತ್ರ ಹಾಕಿಸಿದ್ದು ಇವರಿಗೆ ಪುಷ್ಠಿ ನೀಡಿತು. ಆಗ 'ದಸಂಸ'ದ ವಿರುದ್ಧ ಪ್ರತಿ ಮೆರವಣಿಗೆ 10-15 ಜನರ ಗುಂಪಿನೊಂದಿಗೆ ಮೆರವಣಿಗೆ ನಡೆಸಿದರು, ಅದೇ ರೀತಿ ಬಂಗಾರುಪೇಟೆ ತಾ|| ನ ಕ್ಯಾಸಂಬಳ್ಳಿಹೋಬಳಿಯ ಕಂಗಾಂಡ್ಲಹಳ್ಳಿಯ ದೊಡ್ಡ ಭೂಮಾಲಿಕ ಸಕ್ಕರೆ ಕಾರ್ಖಾನೆ, ಕಾರು ಬಂಗಲೆ ಹೊಂದಿರುವ ಮತ್ತು ಮಂಡಲ್ ಪ್ರಧಾನ ದೊರೆ ಸ್ವಾಮಿನಾಯ್ಡು ಟ್ರ್ಯಾಕ್ಟರ್‌ನಿಂದ ಸುಮಾರು 50 ಜನರೊಂದಿಗೆ ಎಸ್.ಐ. ಪರವಾಗಿ 'ದಸಂಸ' ವಿರುದ್ಧ ಮೆರವಣಿಗೆ ನಡೆಸಲಾಯಿತು. ಇದಕ್ಕೆ ಕಾರಣ ಕ್ಯಾಸಂಬಳ್ಳಿ ಹೋಬಳಿಯ ಸುತ್ತ ಮುತ್ತ ಹಳ್ಳಿಗಳಲ್ಲಿ 'ದಸಂಸ' ಪ್ರಭಲವಾಗಿದ್ದು ತನ್ನ ದೌರ್ಜನ್ಯಕ್ಕೆ ಪೆಟ್ಟುಬೀಳುವುದನ್ನು ಕಂಡುಕೊಂಡ ದೊರೆಸ್ವಾಮಿ ನಾಯ್ಡು ಎಸ್.ಐ.ಗೆ ಸಪೋರ್ಟ್ ಮಾಡುವ ಮುಖಾಂತರ ತನ್ನ ದುರಹಂಕಾರ ಆಡಳಿತವನ್ನು ದಲಿತರ ಮೇಲೆ ನಡೆಸುವುದಕ್ಕೆ ಅನುವು ಮಾಡಿಕೊಂಡ.

ದಿನಾಂಕ 8-8-87 ರಂದು, ರಾಜಕೀಯ ವ್ಯಕ್ತಿಗಳು, ಜಾತಿವಾದಿಗಳು, ಭೂಮಾಲೀಕ ವರ್ಗ ಮತ್ತು ತರಳೆ ಹರಿಜನ ಮುಖಂಡರು ತಾವು ಮಾಡುವ ಭ್ರಷ್ಟ ಕೆಲಸಗಳಿಗೆ, ಕಳ್ಳ ವ್ಯಾಪಾರಿಗಳಿಗೆ, ತಮ್ಮ ಸ್ವಾರ್ಥ ಕೆಲಸಗಳಿಗೆ ಅನುಕೂಲವಾಗಲೆಂದು ಪೊಲೀಸ್ ಪರವಾಗಿ ಬಂಗಾರುಪೇಟೆ ಬಂದ್‌ಗೆ ಕರೆನೀಡಲಾಯಿತು. ಇವರೆಲ್ಲರೂ ಸೇರಿ ನಾಗರೀಕ ಸಂರಕ್ಷಣಾ ಸಮಿತಿ ರಚಿಸಿಕೊಂಡು 'ದಸಂಸ' ಈ ತಾಲ್ಲೂಕಿನಲ್ಲಿ ಬೆಳವಣಿಗೆಯಾಗದಂತೆ ಎಸ್.ಐ. ಪರ ನಾವೆಲ್ಲ ಎಂದು ಒಂದು ಸಣ್ಣ ಕಾರಣ ಇಟ್ಟುಕೊಂಡು ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳು ಒಂದಾಗಿವೆ. ಇದರ ಜೊತೆಗೆ ಇಲ್ಲಿನ ಸ್ಥಳೀಯ ಪತ್ರಿಕೆ ಕೂಡ 'ದಸಂಸ' ವಿರುದ್ಧವಾಗಿ ಕೆಲಸ ಮಾಡಿದೆ.

ಈಗ ಎಲ್ಲರ ಬಾಯಲ್ಲಿ ಕೂಡ 'ದಸಂಸ' ತಾಂಡವವಾಡುತ್ತಿದೆ. ಇದು ಮುಂದೆ ಯಾವ ಯಾವ ಹಂತ ತಲುಪುವುದೋ ಕಾಣಬೇಕಾಗಿದೆ. ಇಲ್ಲಿ 'ದಸಂಸ' ಒಂದು ಸವಾಲಾಗಿದೆ.

ಕಾರ್ಯಕರ್ತರ ಶಿಬಿರ

ಕೋಲಾರಜಿಲ್ಲೆ ಗೌರಿಬಿದನೂರು ತಾ|| ಮಂಚೇನಹಳ್ಳಿಯಲ್ಲಿ ದಿನಾಂಕ 26-7-87 ರಂದು ಒಂದು ದಿನದ ಕಾರ್ಯಕರ್ತರ ಶಿಬಿರ ಏರ್ಪಡಿಸಲಾಗಿತ್ತು. ಈ ಶಿಬಿರದಲ್ಲಿ ಹೋಬಳಿ ಮಟ್ಟದ 5 ಜನ ಕಾರ್ಯಕರ್ತರನ್ನೊಳಗೊಂಡ ಸುಮಾರು 40 ಜನ ಕಾರ್ಯಕರ್ತರು ಭಾಗವಹಿಸಿದ್ದರು. ಶಿಬಿರ ಬೆಳಿಗ್ಗೆ 9-45ಕ್ಕೆ ಪ್ರಾರಂಭಗೊಂಡು, ಇದರ ಉದ್ಘಾಟನೆಯನ್ನು ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನ ಉಪನ್ಯಾಸಕರಾದ ಸಿ. ನಾಗರಾಜ ಮಾಡುತ್ತಾ, ದಲಿತರ ಮೇಲೆ ಆಗುತ್ತಿರುವ ಘಟನೆಗಳನ್ನು ವಿವರಿಸುತ್ತಾ ಕಾರ್ಯಕರ್ತರಲ್ಲಿ ಸಂಘಟನೆಯ ಗಂಭೀರತೆಯನ್ನು ಮೂಡಿಸಿದರು.

ನಂತರ ಮೊದಲನೆಯ ಅಧಿವೇಶನದಲ್ಲಿ ಕಾರ್ಯಕರ್ತರ ಜವಾಬ್ದಾರಿಗಳ ಬಗ್ಗೆ ಕೆ.ಎಂ. ಕೊಮ್ಮಣ್ಣ ಮಾತಾಡುತ್ತಾ, ಜನತೆಯಲ್ಲಿ ಸಂಘಟನೆಯ ಶಕ್ತಿ ಜೀವಂತವಾಗಿ ಉಳಿಯುವಂತೆ ಮತ್ತು ಜನತೆ ಹಾಗೂ ಕಾರ್ಯಕರ್ತರ ಮಧ್ಯೆ ನಿರಂತರವಾಗಿ ಸಂಬಂಧವಿಟ್ಟುಕೊಂಡು ಚಳವಳಿಯನ್ನು ಈ ವ್ಯವಸ್ಥೆಯ ಅನ್ಯಾಯದ ವಿರುದ್ಧ ಹೋರಾಟದ ಮನೋಭಾವವನ್ನು ಮೂಡಿಸಬೇಕೆಂದು ತಿಳಿಸಿದರು,

ಎರಡನೇ ಅಧಿವೇಶನದಲ್ಲಿ 'ದಸಂಸ' ಈ ಪರಿಸ್ಥಿತಿಯಲ್ಲಿ ಹೋರಾಟದ ಅನಿವಾರ್ಯತೆಯನ್ನು ಕೆಲವು ಐತಿಹಾಸಿಕ ಘಟನೆಗಳ ಮೂಲಕ ವಿವರಿಸುತ್ತಾ ಈ ದೇಶದಲ್ಲಿ ಬಲ ರಾಜಕೀಯ ಪಕ್ಷಗಳಾಗಲಿ ಅಥವಾ ಎಡ ಪಂಥೀಯ ಚಳುವಳಿಗಳಾಗಲಿ ದಲಿತರನ್ನು ಕೆಳಹಂತದ ಜನತೆಯನ್ನು ಹತ್ತಿರದಿಂದ ಕಂಡು ನೋಡಿ ಆ ನಿಟ್ಟಿನಲ್ಲಿ ಹೋರಾಟ ನಡೆಸದೇ ಇರುವುದರಿಂದ 'ದಸಂಸ' ಅನಿವಾರ್ಯವಾಗಿದೆ ಎಂದು ಜಿಲ್ಲಾ ಸಂ. ಸಂಚಾಲಕ ರಾಮಚಂದ್ರ ತಿಳಿಸಿದರು,

ಸಂಜೆ 7 ಗಂಟೆಗೆ ಬಹಿರಂಗ ಸಭೆ ಮತ್ತು ದಲಿತರ ಕಲಾಮಂಡಳಿಯಿಂದ ಸಾಂಸ್ಕೃತಿಕ ಕಾರ್ಯಕ್ರಮ ನೀಡಲಾಯಿತು. ಈ ಶಿಬಿರದ ವ್ಯವಸ್ಥೆಯನ್ನು ಶ್ರೀರಂಗ ವಹಿಸಿಕೊಂಡಿದ್ದರು.

● ಕೆ.ಎಂ. ಕೊಮ್ಮಣ್ಣ

ನಿಮ್ಮ ಹತ್ತಿರಕ್ಕೆ ನೀರು ತರಲು ನಾವೆಷ್ಟು ದೂರ ಹೋಗಿದ್ದೇವೆ!

ರಾಜ್ಯಾದ್ಯಂತ 98, 496 ಕೊಳವೆ ಬಾವಿಗಳು 24 ದಶಲಕ್ಷ ಬಾಯಾರಿದ ಜನಕ್ಕೆ ನೀರೊದಗಿಸುತ್ತಿವೆ.

ಕುಡಿಯುವ ನೀರು ಪ್ರತಿಯೊಬ್ಬ ಮನುಷ್ಯನಿಗೂ ಅತ್ಯಾವಶ್ಯ. ಅದ್ದರಿಂದಲೇ ಕರ್ನಾಟಕ ಸರ್ಕಾರವು ಕುಡಿಯುವ ನೀರೊದಗಿಸುವ ಯೋಜನೆಯನ್ನು ಆದ್ಯ ಗಮನದಲ್ಲಿರಿಸಿಕೊಂಡಿದೆ.

ಸರ್ಕಾರವು (ಪಟ್ಟಿಯುಲ್ಲಿರುವಂತೆ) ದಿನಕ್ಕೆ 27 ಕೊಳವೆ ಬಾವಿಗಳನ್ನು ಕೊರೆಯುವ ವೇಗ ಗತಿಯುಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿ 50,000 ಬಾವಿಗಳನ್ನು ತೋಡಿವೆ. ಈ ಸಂಖ್ಯೆಯು ಸ್ವಾತಂತ್ರ್ಯನಂತರದಿಂದ ಮಾರ್ಚ್ 31, 1982ರವರೆಗೆ ಕೊರೆಯಲಾದ ಬಾವಿಗಳ ಸಂಖ್ಯೆಗೆ ಬಹುತೇಕ ಸಮೀಪ! ಇಂದು 98, 496 ಕೊಳವೆ ಬಾವಿಗಳು ಪ್ರತಿದಿನ 24ದಶಲಕ್ಷ ಜನರಿಗೆ ನೀರೊದಗಿಸುತ್ತಿವೆ. ಇವು ಕರ್ನಾಟಕದ ಬಹಳಷ್ಟು ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸಿವೆ. ಇಷ್ಟರಲ್ಲೇ ಇನ್ನುಳಿದ ಶೇಕಡ 20 ಹಳ್ಳಿಗಳಲ್ಲೂ ಕೊಳವೆ ಬಾವಿಗಳಾಗಿ ನೀರು ತರಲಿವೆ. ರಾಷ್ಟ್ರದ 6ಲಕ್ಷ ಕೊಳವೆ ಬಾವಿಗಳ ಪೈಕಿ 1:6 ಭಾಗ(1 ಲಕ್ಷ) ಬಾವಿಗಳು ಕರ್ನಾಟಕದಲ್ಲಿವೆ.

ಇಂತಹ ಸಾಧನೆಯ ಮೊದಲ ರಾಜ್ಯ ಕರ್ನಾಟಕವಾಗಿದೆ.

ಭರವಸೆಗಳನ್ನು ಕಾರ್ಯರೂಪಗೊಳಿಸುವುದು ಕಠಿಣ ಪರಿಶ್ರಮದ ಕೆಲಸ. ಅಂತಹ ಪರಿಶ್ರಮವನ್ನು ಸ್ವೀಕರಿಸಲು ಸರ್ಕಾರವು ಸದಾ ಸಿದ್ಧವೆಂದು ಈ ಸಾಧನೆ ನಿರೂಪಿಸುತ್ತದೆ.

1982–1986ರ ಅವಧಿಯುಲ್ಲಿ ಕರ್ನಾಟಕದಲ್ಲಿ ಕೊರೆಯುಲಾದ ಬಾವಿಗಳ ಸಂಖ್ಯಾ ವಿವರ

ಮಾರ್ಚ್ 31, 1982ರವರೆಗೆ...47,726

ವರ್ಷ	ಬಾವಿಗಳ ಸಂಖ್ಯೆ
1982-83	9,978
1983-84	15,218
1984-85	13,830
1985–86	10,294
1986-87	1,450
	50,770

ಕುಡಿಯುವ ನೀರಿನ ಪೂರೈಕೆ ನಮ್ಮ ವಾಗ್ದಾನ.

● ಕರ್ನಾಟಕ ವಾರ್ತೆ

ಭೂ ವಿವಾದ :

ರೆವಿನ್ಯೂ ಇಲಾಖೆ ಮಾಡಿಸಿದ ಕೊಲೆ

"ನೆಲ ದಲಿತರಿಗಿಂದು ಯಾವುದೇ ಷಂಡ ಸರ್ಕಾರಕ್ಕಿಂತಲೂ ಪ್ರಯೋಜನಕಾರಿ. ಇನ್ನು ಅಧಿಕಾರಿ ವರ್ಗ ಜನತೆಯ ಬೆನ್ನ ಹಿಂದಿನ ರಾಕ್ಷಸರ, ದಲ್ಲಾಳಿಗಳಿಂದಾಗಿ ಅಂಥ ಜಮೀನು ಅಧಿಕಾರಿಗಳಿಂದ ಹುಟ್ಟುವ ಸುಳ್ಳು ದಾಖಲೆಗಳಿಗೇ ಸಾಕ್ಷಿ. ಹಪೊಣಂದಿಗನ ಹೇಲಿನಲ್ಲಿ ನಾಲಿಗೆ ಅದ್ದೊ ಅಧಿಕಾರಿಗಳಿಂದ ನರಸಿಂಹಯ್ಯನಂಥ ಎಷ್ಟೋ ಬಂಧುಗಳು ಕೊಲೆಯಾದರೆ ಸಂಸಾರಗಳು ಬೀದಿಪಾಲಾಗುತ್ತವೆ. ಸುಳ್ಳು ದಾಖಲೆ ಸೃಷ್ಟಿಸಿದ ರೆವಿನ್ಯೂ ಇಲಾಖೆ ನರಸಿಂಹಯ್ಯನ ಕೊಲೆ ಮಾಡಿಸಿದೆ. ಉಳಿದ ವಿಧವೆ ಲಕ್ಷ್ಮಮ್ಮ, ಮಗ ಶ್ರೀಕಂಠಯ್ಯ ಮತ್ತವರ ಗುಡಿಸಲು– ಬದುಕಿಗೆಂದಿರುವ ನೆಲದ ಬಾಳಿಗೆ ಮತ್ತೆ ಯಾವ ಬೆಂಕಿ ಬೀಳುವುದೋ ಕಾಯಬೇಕಿದೆ.

ಮದನ ಘಟ್ಟ ಸ.ನಂ. 47ರಲ್ಲಿ 11 ಎ 25 ಗುಂ, ದರಖಾಸ್ತು ಜಮೀನನ್ನು 14 ಜನ ಭೂರಹಿತ ಪರಿಶಿಷ್ಟರಿಗೆ 1979ರಲ್ಲಿ ಹಂಚಿ ಎಲ್ಲಾ ಹಕ್ಕುಗಳನ್ನೂ ನೀಡಲಾಗಿತ್ತು. ಅಂದಿನಿಂದ ಈ ಎಲ್ಲಾ ದಲಿತರ ಆಸೆಗೆ ಆಕಾಶ ತೋರಿಸಿ 13 ಜನರ ದರಖಾಸ್ತು ಜಮೀನನ್ನು ಊರಿನ ಹಣವಂದಿಗರು, ಜನವಂದಿಗರು ಲಪಟಾಯಿಸಿದ್ದರು. ಇವರಲ್ಲಿ ಬಸವಲಿಂಗಯ್ಯನು ಒಬ್ಬ. ಈತ ನರಸಿಂಹಯ್ಯನ ಜಮೀನಿಗೆ ಅಂಟಿದ ಒಂದು ತೆಂಗಿನ ತೋಟದ ಮಾಲೀಕ. ನರಸಿಂಹಯ್ಯನ ಜಮೀನಿಗೂ ತನ್ನ ತೋಟವನ್ನೇ ವಿಸ್ತರಿಸಿ ಭಾರಿ ಕುಳವಾಗೋ ಆಸೆ ಕಂಡಿದ್ದ. ಜಮೀನನ್ನ ಲಪಟಾಯಿಸಲು ನಡೆಸಿದ್ದ ಚಿತಾವಣೆಗೆ ಮಾತ್ರ ನರಸಿಂಹಯ್ಯ ತಲೆ ಒಗೆದಿದ್ದ. 1979ರಿಂದ ತನ್ನ ಜಮೀನನ್ನು ಮಾರದೇ ತನ್ನ ಜೀವಕ್ಕೆ ಆಧಾರ ಮಾಡಿಕೊಂಡಿದ್ದು ಅಂದಿನಿಂದಲೇ. 1ಎ. 20 ಗುಂಟೆ ಜಮೀನಿನ ಎಲ್ಲಾ ದಾಖಲಾತಿಗಳು ನರಸಿಂಹಯ್ಯನ ಹೆಸರಿನಲ್ಲಿದ್ದು, ಇವನೇ ಹಿಡುವಳಿದಾರನೂ ಆಗಿದ್ದ.

1985-86. ಮದನಘಟ್ಟ ರೆವಿನ್ಯೂ ಇಲಾಖೆ, ಗ್ರಾಮ ಲೆಕ್ಕಾಧಿಕಾರಿ, ತಹಸೀಲ್ದಾರ್ ಕಛೇರಿವರೆಗಿನ ವ್ಯವಹಾರದಲ್ಲೆ ನರಸಿಂಹಯ್ಯನ ಜಮೀನಿನ ಪಹಣಿ ಬಸವಲಿಂಗಯ್ಯನ ಹೆಸರಿಗೆ ಬದಲಾಗಿತ್ತು. ಈ ವ್ಯವಹಾರ ನರಸಿಂಹಯ್ಯನಿಗೆ ಗೊತ್ತಾಗಲಿಲ್ಲ. ಇಲಾಖೆಯೂ ಯಾವ ಸೂಚನೆಯನ್ನೂ ನೀಡದೆ, ಸ್ಥಳ ಪರೀಕ್ಷೆ ಮಾಡದೆ, ನಂತರ ಖಾತೆಯನ್ನೂ ಕೂಡ ಬದಲಿಸಿ ಬರೆಯಲಾಗಿತ್ತು. ಕಾರಣ ಕೇಳಿದವರಿಗೆ ಒತ್ತುವರಿ ಕಾಯ್ದೆ ಅನ್ವಯ ಎನ್ನಲಾಗಿದೆ.

ಕಳೆದ ಮೇ 14ರಂದು ಬಸವಲಿಂಗಯ್ಯ ಮೊದಲ ಬಾರಿಗೆ ನರಸಿಂಹಯ್ಯನ ಜಮೀನಿಗೆ ಉಳುಮೆಗೆ ಹೋಗಿದ್ದ. ನರಸಿಂಹಯ್ಯ, ಮಗ ಶ್ರೀಕಂಠಯ್ಯ ಮತ್ತಿತರರು ಇವನನ್ನು ತಡೆದಿದ್ದರು. ಅಂದು ನಡೆದ ಮಾತು–ಕತೆ ನರಸಿಂಹಯ್ಯನ ಭವಿಷ್ಯಕ್ಕೆಭರ್ಜಿ ಹಾಕಿಸಿತ್ತು. ಈ ಬಗ್ಗೆ ನರಸಿಂಹಯ್ಯ ಪೊಲೀಸ್‌ಗೆ ಕಂಪ್ಲೆಂಟ್ ಕೊಟ್ಟು ತನ್ನ ಜೀವ ಜಮೀನು ರಕ್ಷಣೆ ಕೋರಿದ್ದ. ಮತ್ತೆ ಮಳೆ ಬಿದ್ದಾಗ ನರಸಿಂಹಯ್ಯ ಜಮೀನನ್ನ ಉಳುಮೆ ಮಾಡಲು ಹೋದಾಗ ಬಸವಲಿಂಗಯ್ಯ ಮತ್ತವನ ಸಂಗಡಿಗರು ತಡೆದು ಸ್ವಲ್ಪ ಮಾತುಕತೆಗಳು ಬಿಸಿ ಏರಿದ್ದವು. ಆಗ ನರಸಿಂಹಯ್ಯ ಪೋಲೀಸರನ್ನ ಬಿಟ್ಟು ಸ್ಥಳೀಯ ದಲಿತ–ಸಂಘರ್ಷ ಸಮಿತಿ ಮೊರೆ ಹೊಕ್ಕ. ಪರಿಣಾಮವಾಗಿ ಕಾರ್ಯಕರ್ತರು ಸ್ಥಳ ಪರೀಕ್ಷೆ ಮಾಡಿ ತಹಸಿಲ್ದಾರ್ ಭೇಟಿ ಮಾಡಿದರು.

ಭೇಟಿಯಲ್ಲಿ ಶ್ರೀಕಂಠಯ್ಯನಿಂದ ಅರ್ಜಿಯೊಂದನ್ನ ಕೊಡಿಸಿ ನರಸಿಂಹಯ್ಯನಿಗೆ ಊರುಗೋಲಾದ ಜಮೀನಿನ ಬಗ್ಗೆ ವಿವರ ತಿಳಿಸಿದರು.

ಜುಲೈ 31ರಂದು ಸ್ಥಳೀಯ ರೈತ ಸಂಘದ ರಮೇಶಬಾಬು ಈ ವಿವಾದ ಕುರಿತು ಅಸಹಾಯಕ ದಲಿತ ನರಸಿಂಹಯ್ಯನ ರಕ್ಷಣೆ ಕೋರಿ ಬರೆದ ಸುದ್ದಿ ಪ್ರಜಾವಾಣಿಯಲ್ಲಿ ಪ್ರಕಟಗೊಂಡಿತ್ತು. ಇತ್ತ ಅದೇ ದಿನ ಗುಬ್ಬಿ ತಹಸಿಲ್ದಾರ್ ಆದೇಶದ ಮೇರೆಗೆ ರಾಜಸ್ವ ನಿರೀಕ್ಷಕ ಸ್ಥಳಕ್ಕೆ ಭೇಟಿ ನೀಡಿ, ನರಸಿಂಹಯ್ಯನ ಕಡೆಯವರನ್ನ ಮಾತ್ರ ಕರೆದು ಜಮೀನನ್ನ ಉಳುಮೆ ಮಾಡಲು ತಿಳಿಸಿ ಹೊರಟಿದ್ದ, ಸಾಯೇಬರನ್ನ ಬಸ್ಸು ಹತ್ತಿಸಿ ಬರಲು ಶ್ರೀಕಂಠಯ್ಯ ಹೋಗಿದ್ದ. ಉಳಿದ ನರಸಿಂಹಯ್ಯ. ಹೆಂಡತಿ ಲಕ್ಷ್ಮಮ್ಮ ಜಮೀನನ್ನ ಉಳುಮೆ ಮಾಡಲು ಹೋದಾಗ,

* ಬಸವಲಿಂಗಯ್ಯ
* ನಂಜಪ್ಪ
* ನಂಜುಂಡಯ್ಯ
* ಸಿದ್ದರಾಮಯ್ಯ
* ಗುರುಸಿದ್ದಮ್ಮ
* ಸೌಭಾಗ್ಯಮ್ಮ
* ಕುಮಾರಯ್ಯ

ತಡೆಯುತ್ತಾರೆ. ನಂತರ ಬಾಯಿಗೆ ಬಂದಂತೆ ಬಯ್ಯುತ್ತಾ ಬಂದ ಎಲ್ಲರೂ ನರಸಿಂಹಯ್ಯನನ್ನೇ ಹೊಡೆಯುತ್ತಿದ್ದಾಗ ನರಸಿಂಹಯ್ಯ ಕುಸಿದು ಬೀಳ್ತಾನೆ. ಅಸಹಾಯಕ ಕೂಗು ಯಾರಿಗೆ ಕೇಳಿಸುತ್ತದೆ? "ಯಾವ ಏಟು ಎಲ್ಲಿಗೆ ಬಿತ್ತೊ, ಹೆಂಡತಿ ಲಕ್ಷ್ಮಮ್ಮ ಎದುರಿನಲ್ಲೇ ಗಂಡನ್ನ ಕಳೆದುಕೊಂಡ ಮುಂಡೆಯಾಗಿ ಬಾಯಿ ಬಡಿದುಕೊಳ್ಳುತ್ತಾಳೆ. ಯಾರಿದ್ದಾರೆ?? ಬರೀ ಬಸವಲಿಂಗಯ್ಯನ ಸಮೂಹ. ಸಮಯ ಮೂರು ಗಂಟೆಯಾಗಿತ್ತು ಎನ್ನುತ್ತಾರೆ.

ಮಗ ಶ್ರೀಕಂಠಯ್ಯ ಬಂದಾಗ ತಾಯಿ ಕುಸಿದು ಬಿದ್ದಿದ್ದಾಳೆ. ತಂದೆ ಕೊಲೆಯಾಗಿದ್ದಾನೆ. ನೋವಿನಲ್ಲಿ ಪೊಲೀಸ್‌ಗೆ ಕಂಪ್ಲೆಂಟ್ ಕೊಡಲೋದರೆ ದಫೇದಾರರು "ಅದ್ಹೆಂಗೆ ಕೊಲೆ ಅಂತ ಹೇಳ್ತಿ?

ಸಾಕ್ಷಿ ಬೇಕು?

ಸಾಯೇಬ್ರು ಇಲ್ಲ" ಎಂದಿದ್ದಾರೆ

ನಂತರ ಕೆಲ ದ.ಸಂ.ಸ, ಕಾರ್ಯಕರ್ತರು ಹೋದ ಮೇಲೆ ಕೇಸ್ ದಾಖಲೆಯಾಗಿದೆ,

ತಾ॥3.8.87 ರಂದು ದ.ಸಂ.ಸ. ಮತ್ತು ರೈತ ಸಂಘದ ತಾ॥ ಶಾಖೆಗಳು ಈ ಅನ್ಯಾಯ ಪ್ರತಿಭಟಿಸಿ "ಸುಳ್ಳು ದಾಖಲೆ ಸೃಷ್ಟಿಸಿದ ರೆವಿನ್ಯೂ ಅಧಿಕಾರಿಗಳನ್ನ ಅಮಾನತ್ತಿನಲ್ಲಿಟ್ಟು, ಅಪರಾಧಿಗಳನ್ನ ನ್ಯಾಯಾಂಗ ತನಿಖೆಗೊಳಪಡಿಸಿ, ನೊಂದವರಿಗೆ ಸೂಕ್ತ ನ್ಯಾಯ

(13ನೇ ಪುಟಕ್ಕೆ)

ಕೃಷಿಕ ಸಾಲ ಪಾಸ್ ಪುಸ್ತಕ

'ಕೃಷಿಕರ (ಖಾತೆದಾರರ) ಸ್ಥಿರಾಸ್ತಿ ಮತ್ತು ಸಾಲಗಳ ಪೂರ್ಣ ಮಾಹಿತಿಯ ಉಪಯುಕ್ತ ಕೈಪಿಡಿ'

ಕೃಷಿಕ ಬಂಧುಗಳೇ,

ನಿಮ್ಮ ಸ್ಥಿರಾಸ್ತಿ ಮತ್ತು ಸಾಲಗಳ ಪೂರ್ಣ ವಿವರಗಳನ್ನು ಒಂದೇ ಪುಸ್ತಕದಲ್ಲಿ ಭರ್ತಿ ಮಾಡಿಸುವ ಸೌಲಭ್ಯವನ್ನು ನಿಮಗೀಗ ಸರ್ಕಾರವು ಒದಗಿಸಿ ಕೊಟ್ಟಿದೆ.

ಈ ಹಿಂದೆ ನೀವು ಸಾಲ ಪಡೆಯಲು ಅಥವಾ ಕೋರ್ಟು-ಕಛೇರಿಗಳ ವ್ಯವಹಾರಕ್ಕೆ ಬೇಕಾಗುವ ನಿಮ್ಮ ಆಸ್ತಿ, ಹಕ್ಕು ಪತ್ರಗಳ ಪ್ರಮಾಣೀಕೃತ ನಕಲು ಇತ್ಯಾದಿಗಳನ್ನು ಪಡೆಯಲು ಎದುರಿಸುತ್ತಿದ್ದ ತೊಂದರೆಗಳು ಇನ್ನು ಮುಂದೆ ಇರುವುದಿಲ್ಲ. ಜೊತೆಗೆ ಯಾವುದೇ ಕಾರಣಗಳಿಂದಲೂ ನೀವು ಮೋಸ ಹೋಗುವ ಪ್ರಮೇಯ ಇರುವುದಿಲ್ಲ.

ನಿಮ್ಮ ಯಾವುದೇ ಸ್ಥಿರಾಸ್ತಿಯ ಕೊಂಡು-ಕೊಳ್ಳುವಿಕೆ, ಪಾಲುಗಾರಿಕೆ, ವಾರಸಾ ಮಾಡಿಸಿಕೊಳ್ಳುವಿಕೆ, ಮೊದಲಾದ ಬದಲಾವಣೆಗಳನ್ನು ತಕ್ಷಣವೇ ಸಂಬಂಧಿಸಿದ ಅಧಿಕಾರಿಗಳಿಂದ ಈ ಪುಸ್ತಕದಲ್ಲಿ ಭರ್ತಿ ಮಾಡಿಸಿ, ಸಹಿ ಹಾಗೂ ಮೊಹರು ಹಾಕಿಸಿಕೊಳ್ಳಿ.

ನೀವು ಪಡೆದ ಸಾಲಗಳ ವಿವರ, ಷೇರು, ನಿಮ್ಮ ಜಮೀನಿನ ಅಥವಾ ಸ್ಥಿರಾಸ್ತಿಯ ಮೇಲೆ ನೀವು ಸಲ್ಲಿಸುತ್ತಿರುವ ಕಂದಾಯ, ವ್ಯವಹಾರ ಹೀಗೆ ಎಲ್ಲಾ ಮಾಹಿತಿಗಳನ್ನು ಈ ಪುಸ್ತಕದಲ್ಲಿ ಭರ್ತಿ ಮಾಡಿಸಬೇಕು.

ಪ್ರತಿ ವರ್ಷ ಆಗಸ್ಟ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ನಿಮ್ಮ ಪಾಸ್ ಪುಸ್ತಕದ ವಿವರಗಳನ್ನು ಆಯಾ ಅವಧಿಗೆ ಹೊಂದುವಂತೆ ಬರೆಯಿಸಿ ಕೊಳ್ಳಿರಿ.

ಯಾದೇ ಕೆಲಸಕ್ಕೆ ಹಕ್ಕು ಪತ್ರದ ನಕಲು ಬೇಕಾದಾಗ ನಿಮ್ಮ ಪಾಸ್ ಪುಸ್ತಕವನ್ನು ಹಾಜರುಪಡಿಸಿದರೆ, ಸಂಬಂಧಪಟ್ಟ ಅಧಿಕಾರಿಗಳು ಅದರ ಮಾಹಿತಿ ಸಂಗ್ರಹಿಸಿಕೊಂಡು ಅದಕ್ಕೆ ಪ್ರಮಾಣೀಕೃತ ನಕಲೆಂದು ಮನ್ನಣೆ ನೀಡುತ್ತಾರೆ.

ನಿಮ್ಮ ತಾಲ್ಲೂಕಿನ ತಹಸೀಲ್ದಾರರಿಗೆ ಮೊದಲು ಫಾರ್ಮ್ 1ರಲ್ಲಿ ಅರ್ಜಿ ಸಲ್ಲಿಸಬೇಕು. ಆ ಅರ್ಜಿಯಲ್ಲಿ ನೀವು ಕೊಟ್ಟಿರುವ ಪೂರ್ಣ ವಿವರಗಳ ಪೂರ್ತಿ ತನಿಖೆಯ ನಂತರ ತಹಸೀಲ್ದಾರರು ಈ ಪುಸ್ತಕವನ್ನು ನಿಮಗೆ ನೀಡುವರು.

ಈ ಪುಸ್ತಕದಲ್ಲಿನ ಮೊದಲೆರಡು ಪುಟಗಳಲ್ಲಿ ಕೇಳಲಾದ ಹೆಸರು, ವಿಳಾಸ ಜೊತೆಗೆ ಭಾವಚಿತ್ರ ಹಾಗೂ ಖಾತೆದಾರನ ರುಜುವಿನ ಮೂರು ಮಾದರಿಗಳನ್ನು ನೀಡಬೇಕು. ನಂತರ ಈ ಪಾಸ್ ಪುಸ್ತಕಕ್ಕೆ ಗ್ರಾಮ ಲೆಕ್ಕಾಧಿಕಾರಿಯ ಸಹಿ ಮಾಡಿಸಿಕೊಳ್ಳಬೇಕು.

ರೈತ ಬಂಧುಗಳೇ, ಈ ಪುಸ್ತಕವು ನಿಮ್ಮ ಸದುಪಯೋಗಕ್ಕೆ ಮೀಸಲು ಇದು ನಿಮಗೆ ಎಲ್ಲಾ ಮಾಹಿತಿಯನ್ನು ನೀಡುವ ಒಂದು ಉಪಯುಕ್ತ "ಕೈಪಿಡಿ" ಯಾಗುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ.

ಕರ್ನಾಟಕ ವಾರ್ತೆ

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಮೂಲ: ವಿ. ಆರ್. ನಾರ್ಲ
ಅನು: ಗಂಗಾಧರಮೂರ್ತಿ

ಆಧುನಿಕ ಕಾಲ

7

ನಿಜ ಹೇಳಬೇಕೆಂದರೆ ಮೋಹನರಾಯ್ ಸಾರಸಂಗ್ರಹ (ECLECTIC) ದೃಷ್ಟಿಯವರು ಎನ್ನುವುದು ನನ್ನ ವ್ಯಾಕುಲತೆಗೆ ಕಾರಣವಾಗಿದೆ. ಅವರ ಈ ಸಾರಸಂಗ್ರಹ ಪದ್ಧತಿಯನ್ನು ಕಂಡು ದೆರೋಜಿಯೋ ಅವರ ಅಭಿಪ್ರಾಯಗಳು ಎನು ಎನ್ನುವುದನ್ನು ಅವರ ಸ್ನೇಹಿತರಾಗಲಿ ಅಥವಾ ವಿರೋಧಿಗಳಾಗಲಿ ಹೇಳಲು ಸಾಧ್ಯವಿಲ್ಲ. "ಅವು ಏನಾಗಿದ್ದವು ಎಂದು ಹೇಳುವುದಕ್ಕಿಂತ, ಏನಾಗಿರಲಿಲ್ಲ ಎಂದು ಹೇಳುವುದು ಸುಲಭ 6 ಎನ್ನುವಂತಹ ಮಾತನಾಡುತ್ತಾನೆ. ಈ ಮಾತುಗಳು ಆಧಾರರಹಿತವಾದ್ದೆಂದು ತಳ್ಳಿಹಾಕುವುದು ಸಾಧ್ಯವಿಲ್ಲ.

ಮೋಹನರಾಯ್ ಶ್ರೀಮಂತ ಮುಸ್ಲಿಮರ ಹಾಗೆ ಉಡುಗೆ ತೊಡುಗೆಗಳನ್ನು ಬಳಸುತ್ತಿದ್ದರು ಉದಾರವಾದೀ ಹಿಂದುವಿನಂತೆ ಜೀವನ ನಡೆಸುತ್ತಿದ್ದರು. ಏಕಮೂರ್ತಿವಾದದಲ್ಲಿ ನಂಬಿಕೆಇಟ್ಟ ಕ್ರಿಶ್ಚಿಯನ್ನನಂತೆ ಯೋಚಿಸುತ್ತಿದ್ದರು. ಅವರ ಆರ್ಥಿಕ ಆಸಕ್ತಿಗಳು ಅವರನ್ನು ಭೂಮಾಲಿಕರು ಮತ್ತು ಬಡ್ಡಿ ಲೇವಾದೇವಿ ಮಾಡುವವರ ಜತೆಗೂಡಿಸಿತು. ಆದರೆ ಅವರ ಬೌದ್ಧಿಕ ಆಸಕ್ತಿಗಳು ನ್ಯಾಯ ಮತ್ತು ಸ್ವಾತಂತ್ರ್ಯಗಳ ಆಧಾರದ ಮೇಲೆ ನಿಂತ ಸುಖೀರಾಜ್ಯದ ಕನಸನ್ನು ನೇಯುತ್ತಿದ್ದವು. ಒಟ್ಟಿನಲ್ಲಿ ಅವರು ವೈಚಾರಿತೆಯನ್ನು ಬಯಸಿದರಾದರೂ ಹಲವಾರು ಸಂದರ್ಭಗಳಲ್ಲಿ ನಂಬಿಕೆಗಳ ಸುತ್ತಲಾರಂಭಿಸಿದರು. ಮೂರ್ತಿ ಪೂಜೆಯನ್ನ ಖಡಾಖಂಡಿತವಾಗಿವಿರೋಧಿಸಿದರೂ, ಮೂರ್ತಿಪೂಜೆಗೂಕೀಳಾದ ತಾಂತ್ರಿಕ ವಿಧಾನಗಳನ್ನುಅಭ್ಯಸಿಸತೊಡಗಿದರು. ಹೊಂದಿಕೊಳ್ಳಲಾಗದಂಹವುಗಳಲ್ಲಿ ಹೊಂದಾಣಿಕೆಯನ್ನು ತರುವ ಯತ್ನ ಅವರದಾಗಿತ್ತು. ಈ ದೃಷ್ಟಿಕೋನವೇ ಅವರ ಜೀವನ ಮತ್ತು ನಿಲುವುಗಳಲ್ಲಿ ಹಲವಾರು ರೀತಿಯ ವೈರುಧ್ಯಗಳನ್ನು ತರಲು ಕಾರಣವಾಯಿತೆನ್ನಬಹುದು.

ಈ ವೈರುಧ್ಯಗಳಲ್ಲದಿದ್ದರೆ ವಿಜ್ಞಾನ ಮತ್ತು ಧರ್ಮ ಇವೆರಡಕ್ಕೂ ಜೋತುಬೀಳುವುದು ಸಾಧ್ಯವಿಲ್ಲ ಎನ್ನುವ ವಾಸ್ತವ ಅವರಿಗೆ ಗೊತ್ತಾಗಬಹುದಿತ್ತು. ಸಾಮಾನ್ಯವಾಗಿ ಹೇಳುವಂತೆ ವೈಜ್ಞಾನಿಕ ಧರ್ಮ ಸಾಧ್ಯ ಎನ್ನುವುದು ಅರ್ಥಹೀನ. ಹಾಗೇನಾದರೂ ಇರುವುದಾದರೆ ಅದು ವಿಜ್ಞಾನವೂ ಅಲ್ಲ; ಧರ್ಮವೂ ಅಲ್ಲ. ಒಂದು ಮುಖ್ಯ ಸಂದರ್ಭದಲ್ಲಿ ಮೋಹನ್‌ರಾಯ್ ಈ ಸತ್ಯವನ್ನೇ ಅನುಮೋದಿಸಿದ್ದನ್ನು ಕಾಣಬಹುದು. ಪ್ರಾಚ್ಯವಾದಿಗಳು ಎಂದು ಕರೆಯಲಾಗುವವರನ್ನು ವಿರೋಧಿಸಿ ಭಾರತದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಜಾರಿಗೆ ತರುವ ಕಾಲ ವಹಿಸಿ ಮಾತನಾಡುವ ಭಾರತವು ತನ್ನ ಸುದೀರ್ಘ ಕತ್ತಲಿನಿಂದ ಹೊರಬರಬೇಕಾದರೆ ಧರ್ಮದ ಸ್ಥಾನವನ್ನು ವಿಜ್ಞಾನ ಆಕ್ರಮಿಸಬೇಕು ಎನ್ನುತ್ತಾರೆ. ಸಂಸ್ಕೃತ ಶಾಲೆಯನ್ನು ಪ್ರಾರಂಭಿಸುವ ಯೋಜನೆಯನ್ನು ವಿರೋಧಿಸಿ ಆಗಿನ ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ಅಂಹರ್ಸ್ಟ್ ಅವರಿಗೆ ಮೋಹನ್ ರಾಯ್ 1823ರಲ್ಲಿ ಬರೆದ ಪತ್ರವನ್ನು ನೋಡಿದರೆ, ಪ್ರವೇಶಕ್ಕಾಗಿ ಭಾರದ ಹಳಿಯ ತುಕ್ಕು ಹಿಡಿದ ಹೆಬ್ಬಾಗಿಲನ್ನು ಸದ್ದುಮಾಡುತ್ತಿರುವ ವಿಜ್ಞಾನದ ಶಬ್ಧವನ್ನು ಕೇಳುತ್ತಿದ್ದೇವೆಯೋ ಎನಿಸುತ್ತದೆ. ನಿಮ್ಮ ಅಪ್ಪಣೆಯನ್ನು ಕೋರಿ ನಾನು ಈ ಪತ್ರದ ಕೆಲವು ಪ್ರಮುಖ ಸಾಲುಗಳನ್ನು ಉದ್ಧರಿಸುತ್ತೇನೆ: "ಈ ವಿದ್ಯಾಕೇಂದ್ರವನ್ನು ಪ್ರಾರಂಭಿಸಬೇಕು ಎಂದಾಗ ಇಂಗ್ಲೆಡ್ ಸರ್ಕಾರವು ಭಾರತೀಯರಿಗೆ ಶಿಕ್ಷಣ ಕೊಡಲು ಸಾಕಷ್ಟು ಮೊತ್ತದ ಹಣವನ್ನು ವಾರ್ಷಿಕ ವೆಚ್ಚವಾಗಿ ನೀಡಲು ತಯಾರಿರುವುದು ಗೊತ್ತಾಯಿತು. ಗಣಿತ, ಜೀವ ಸಸ್ಯ ಶಾಸ್ತ್ರಗಳು, ರಸಾಯನಶಾಸ್ತ್ರ, ಶರೀರಶಾಸ್ತ್ರ ಮತ್ತಿತರ ಉಪಯುತ್ತ ವಿಜ್ಞಾನ ವಿಷಯಗಳಲ್ಲಿ ಪರಿಪೂರ್ಣತೆಯನ್ನು ಸಾಧಿಸುವ ಮುಖಾಂತರ ಯೂರೋಪಿಯನ್ನರು ವಿಶ್ವದ ಜನತೆಗೆ ಈ ಉಪಯುಕ್ತ ವಿಜ್ಞಾನ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತದೆ ಎನ್ನುವ ಆಶಾವಾದ ನಮ್ಮದಾಗಿತ್ತು. ಮುಂದುವರೆದು ಈ 'ಆಶಾವಾದ'ಕ್ಕೆ ವಿರೋಧವಾಗಿ "ಹಿಂದೂ ಪಂಡಿತರ ಮೇಲ್ವಿಚಾರಣೆಯಲ್ಲಿ ಸಂಸ್ಕೃತ ಶಾಲೆಯೊಂದನ್ನು ತೆರೆದು ಭಾರತೀಯ ವಿದ್ಯಾ ವಿಷಯಗಳನ್ನು ಬೋಧಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿರುವುದು ನಮಗೆ ತಿಳಿದುಬಂದಿದೆ. ಬೇಕನ್ನನಿಗಿಂತ ಹಿಂದೆ ಯೂರೋಪಿನಲ್ಲಿದ್ದ ವಿದ್ಯಾಸಂಸ್ಥೆಗಳ ಲಕ್ಷಣಗಳನ್ನುಳ್ಳ ಇಂಥ ವಿದ್ಯಾಶಾಲೆಗಳು ಸಮಾಜಕ್ಕಾಗಲೀ ಕಲಿಯುವವರಾಗಲೀ ಉಪಯೋಗವಿಲ್ಲದ ವ್ಯಾಕರಣಸೂಕ್ಷ್ಮಗಳನ್ನೂ ಆಧ್ಯಾತ್ಮಿಕ ವಿಚಾರಗಳ ಹೊರೆಯನ್ನೂ ನಮ್ಮ ಯುವಜನರ ಮೇಲೆ ಹೇರುವಂತವಾಗಿವೆ. ಸಾಮಾನ್ಯವಾಗಿ ಭಾರತದಎಲ್ಲ ಭಾಗಗಳಲ್ಲೂ ಬೋಧಿಸಲಾಗುತ್ತಿರುವಂತಹ, ಎರಡು ಸಾವಿರ ವರ್ಷಗಳಿಂದ ಗೊತ್ತಿರುವಂಹುದನ್ನೇ ಕಲಿಯುವುದರ ಜೊತೆಗೆ ಭಾಷ್ಯಕಾರರು ಈ ವಿಷಯಗಳ ಬಗ್ಗೆ ಅಂದಿನಿಂದ ಇಂದಿನವರೆಗೆ ಉತ್ಪಾದಿಸಿರುವ ನಿಷ್ಪಲ ಮತ್ತು ಪೊಳ್ಳು ಸೂಕ್ಷ್ಮತೆಗಳನ್ನು ಕಲಿಯಬೇಕಾಗುತ್ತದೆ. "ಬಳಕೆಯಲ್ಲಿಲ್ಲದಿರುವ ಭಾಷೆಯೊಂದನ್ನು ಕಲಿಯುವಲ್ಲಿನ ನಿಷ್ಪ್ರಯೋಜತೆಯನ್ನು ಕುರಿತಂತ ಕಾರಣದಲ್ಲಿ ಈ ಸಾಲುಗಳು ಕಂಡುಬರುತ್ತವೆ:" ಪರಿಪತಿಯನ್ನು ಪಡೆದುಕೊಳ್ಳಲು ಒಂದು ಜೀವಮಾನವೇ ಬೇಕಾಗುವಷ್ಟು ಕಷ್ಟಮಯವಾಗಿರುವ ಸಂಸ್ಕೃತ ಭಾಷೆಯು ಹಲವಾರು ವರ್ಷಗಳಿಂದ ಜ್ಞಾನ ಪ್ರಸರಣಕ್ಕೆ ಅಡ್ಡಿಯಾಗಿರುವ

ಆತ್ಮವು ದೇವರಲ್ಲಿ ಹೇಗೆ ಲೀನವಾಗುತ್ತದೆ?

ದೈವಿಕತೆ ಎನ್ನುವ ವೇದಾಂತದಿಂದ ಯಾವ ರೀತಿಯ ಪ್ರಗತಿಯೂ ಇಲ್ಲ.

'ಪ್ರಪಂಚವೂ ಮಿಥ್ಯೆ. ತಂದೆ ಸಹೋದರ ಸಂಬಂಧಗಳಲ್ಲಿ ಯಾವ ಸತ್ಯವೂ ಇಲ್ಲ'

ವಿಷಯ ಈಗಾಗಲೇ ಎಲ್ಲರಿಗೂ ಗೊತ್ತಿದೆ. ಪಾರದರ್ಶಕವಲ್ಲದ ತೆರೆಯಂತಿರುವ ಈ ಭಾಷೆಯಲ್ಲಿ ಬಚ್ಚಿಟ್ಟಿರುವ ವಿದ್ಯೆಯ ಫಲಕ್ಕಿಂತ ಕಲಿಯುವ ಶ್ರಮವೇ ಹೆಚ್ಚು. "ಸಂಸ್ಕೃತದ ಮೂಲಕ ಏನನ್ನು ಕಲಿಯಬಹುದು ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ಉತ್ತರವನ್ನು ಕೊಡುವ ಪ್ರಯತ್ನವೂ ಇಲ್ಲಿ ಕಾಣುತ್ತದೆ". ಆತ್ಮವು ದೇವರಲ್ಲಿ ಹೇಗೆ ಲೀನವಾಗುತ್ತದೆ? ದೈವಿಕತೆಗೂ ಇದಕ್ಕೂ ಇರುವ ಸಂಬಂಧವೇನು? ಎನ್ನುವಂತಹ ವಿಚಾರಗಳನ್ನು ವಸ್ತುವನ್ನಾಗುಳ್ಳ ವೇದಾಂತದಿಂದ ಯಾವ ರೀತಿಯ ಪ್ರಗತಿಯೂ ಸಾಧ್ಯವಿಲ್ಲ. ಹಾಗೆಯೇ ಕಣ್ಣೆದುರಿಗಿನ ಪ್ರಪಂಚವು ಮಿಥ್ಯೆ, ತಂದೆ, ಸಹೋದರ ಮುಂತಾದ ಸಂಬಂಧಗಳಲ್ಲಿ ಯಾವ ಸತ್ಯವೂ ಇಲ್ಲ. ಆದ್ದರಿಂದ ಇವು ವಾತ್ಸಲ್ಯ ಯೋಗ್ಯವಲ್ಲ. ಈ ಕಾರಣದಿಂದ ಈ ಬಂಧನಗಳನ್ನು ತೊರೆದು ಇಹದಿಂದ ಬಿಡುಗಡೆ ಹೊಂದುವುದೇ ಯೋಗ್ಯ ಎನ್ನುವಂತಹ ವೇದಾಂತ ಸಿದ್ಧಾಂತಗಳನ್ನು ಕಲಿಯುವುದರಿಂದ ನಮ್ಮ ಯುವ ಜನಾಂಗವು ಸಮಾಜದ ಉತ್ತಮ ಸದಸ್ಯರಾಗುವುದೂ ಸಾಧ್ಯವಿಲ್ಲ. ಅಲ್ಲದೆ ಮೀಮಾಂಸೆಯನ್ನು ಓದುವ ವಿದ್ಯಾರ್ಥಿಯು ಹೋತವನ್ನು ಬಲಿಕೊಡುವವನೊಬ್ಬನನ್ನು ವೇದಾಂತದ ಕೆಲವು ಶ್ಲೋಕಗಳನ್ನು ಉದ್ಧರಿಸಿ ಹೇಗೆ ವಾಮಮುಕ್ತನನ್ನಾಗಿಸಬಹುದು ಎಂದು ತಿಳಿದುಕೊಳ್ಳುವುದರಿಂದಲಾಗಲೀ, ವೇದ ಮುಂತಾದುವುಗಳಲ್ಲಿ ಕಂಡು ಬರುವ ಸೂತ್ರಗಳ ಸ್ವಭಾವ ಮತ್ತು ಪ್ರಭಾವಗಳನ್ನು ಅಭ್ಯಸಿಸುವುದರಿಂದಾಗಲೀ ಯಾವ ಪ್ರಯೋಜನವೂ ಇಲ್ಲ. ವಿಶ್ವದ ವಸ್ತುಗಳನ್ನು ತಾತ್ವಿಕವಾಗಿ ಹೇಗೆ ವರ್ಗೀಕರಿಸಬಹುದು ಮತ್ತು ಆತ್ಮಕ್ಕೂ ದೇಹಕ್ಕೂ, ದೇಹಕ್ಕೂ ಆತ್ಮಕ್ಕೂ. ಕಣ್ಣಿಗೂ ಕಿವಿಗೂ ಇರುವ ತಾತ್ವಿಕ ಸಂಬಂಧಗಳನ್ನು ತಿಳಿದುಕೊಳ್ಳುವುದರಿಂದ ನ್ಯಾಯಶಾಸ್ತ್ರದ ವಿದ್ಯಾರ್ಥಿಯ ಬುದ್ಧಿ ಬೆಳೆಯುತ್ತದೆ ಎನ್ನುವುದು ಸಾಧ್ಯವಿಲ್ಲ".

ಮುಂದಿನ ಈ ಭಾಗವು ಮೋಹನರಾಯ್ ಅವರ ಪತ್ರದ ಪ್ರಾಮುಖ್ಯತೆಯನ್ನು ಹೇಳುವಂತಹದ್ದು "ಮೇಲೆ ಹೇಳಿರುವ ವಿಶೇಷ ಲಕ್ಷಣಗಳ ನಿರುಪಯೋಗಿ ವಿದ್ಯೆಯನ್ನು ಪ್ರೋತ್ಸಾಹಿಸುವ ಬಗ್ಗೆ ನಿಮ್ಮ ಗಮನವನ್ನು ಸೆಳೆಯಬೇಕೆನ್ನುವ ಅಭೀಪ್ಸೆ ನನ್ನದು ಲಾರ್ಡ್ ಬೇಕನ್ನನ ಬರಹಗಳಿಂದೀಚೆಗೆ ಜ್ಞಾನ ಪ್ರಪಂಚವು ಎಷ್ಟು ಮುಂದುವರಿದಿದೆ ಎನ್ನುವುದನ್ನು ಆವನ ಹಿಂದೆ ಯೂರೋಪಿನಲ್ಲಿದ್ದ ವಿಜ್ಞಾನ ಮತ್ತು ಸಾಹಿತ್ಯದ ಜತೆ ಹೋಲಿಸಿ ನೋಡಬೇಕು ಎನ್ನುವ ಉದ್ದಿಶ್ಯವು ನಿಮಗಿದ್ದಿದ್ದರೆ ವಿಜ್ಞಾನವನ್ನು ಬೆಳಸುವ ಚಾಣಾಕ್ಷ ವಿದ್ಯಾವ್ಯವಸ್ಥೆಯನ್ನು ಬೇಕನ್ನನ ಚಿಂತನೆಯ ಮೂಲಕ ಮೂಲೆಗುಂಪು ಮಾಡುವ ಅವಶ್ಯಕತೆ ಇರಲಿಲ್ಲ. ಅದೇ ರೀತಿಯಲ್ಲಿ ಬ್ರಿಟಿಷ್ ಸರ್ಕಾರದ ಉದ್ದೇಶವು ಇದೇ ಆಗಿದ್ದರೆ ಈ ದೇಶವನ್ನು ಸಂಸ್ಕೃತ ವಿದ್ಯಾಭ್ಯಾಸದ ಮೂಲಕ ಅಜ್ಞಾನದಲ್ಲಿಡುವ ಕುತಂತ್ರವೇ ಆಗಿದೆಎನ್ನಬಹುದು.

ಮೋಹನ್ ರಾಯ್‌ರ ಹಿಂದೂ ಧರ್ಮದ ವೈಪರಿತ್ಯಗಳನ್ನ ತಪ್ಪು ಎನ್ನುವಂತಿಲ್ಲ ಆದರೆ ಇವೆಲ್ಲ ಧಾರ್ಮಿಕ ಸುಧಾರಣೆಗಳೇ ವಿನಃ ವೈಜ್ಞಾನಿಕ ಕ್ರಾಂತಿ ಅಲ್ಲ.

ದೇಶೀಯರ ಅಭಿವೃದ್ಧಿಯೇ ಸರ್ಕಾರದ ಧ್ಯೇಯವಾಗಿರಬೇಕಾದ್ದರಿಂದ ಉದಾರವೂ, ಜ್ಞಾನ ಮೂಲಕ ಆದ ಬೋಧನೆ ವ್ಯವಸ್ಥೆಯನ್ನು ತರುವುದು ಸೂಕ್ತ. ಗಣಿತ, ಜೀವ ಸಸ್ಯಶಾಸ್ತ್ರಗಳು, ರಸಾಯನಶಾಸ್ತ್ರ, ಶರೀರ ಶಾಸ್ತ್ರ ಮುಂತಾದ ಉಪಯುಕ್ತ ವಿಜ್ಞಾನ ವಿಷಯಗಳನ್ನು ಬೋಧಿಸಲು ಯೂರೋಪಿನಲ್ಲಿ ಶಿಕ್ಷಣ ಪಡೆದ ಪ್ರತಿಭಾವಂತರನ್ನೂ ವಿದ್ವಾಂಸರನ್ನೂ ನೇಮಿಸುವುದರ ಜತೆಗೆ ಅಗತ್ಯ ಪುಸ್ತಕಗಳು ಮತ್ತು ಉಪಕರಣಗಳನ್ನುಳ್ಳ ಒಂದು ಕಾಲೇಜನ್ನು ಸ್ಥಾಪಿಸುವುದು ಔಚಿತ್ಯ ಪೂರ್ಣವೆನಿಸುತ್ತದೆ".

ವಿಜ್ಞಾನದ ಪರ ಇದಕ್ಕಿಂತ ಸಮರ್ಪಕವಾಗಿಯೂ ಬಲಿಷ್ಠವಾಗಿಯೂ ವಾದಿಸುವುದು ಕಷ್ಟವೇಸರಿ. ಆದರೂ ಬೇಕನ್‌ಸಮಾಜವನ್ನು ಸ್ಥಾಪಿಸುವ ಬದಲು ರಾಮಮೋಹನರಾಯ್ ಬ್ರಹ್ಮಸಮಾಜವನ್ನು ಏಕೆ ಸ್ಥಾಪಿಸಿದರು? ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಲು ಆಗಿದ್ದ ಒಂದೇ ಮಾರ್ಗವೆಂದರೆ ಬೇಕನ್ನನ ವಿಚಾರಗಳನ್ನು ಪ್ರಚಾರ ಮಾಡುವುದಾಗಿತ್ತೇ ಹೊರತು ಬ್ರಹ್ಮನನ್ನು ಪ್ರಾರ್ಥಿಸುವುದಾಗಿರಲಿಲ್ಲ. ಬಹುದೇವತಾರಾಧನೆಯನ್ನು ಖಂಡಿಸಿದ್ದಾಗಲೀ ಮೂರ್ತಿಪೂಜೆಯನ್ನು ವಿರೋಧಿಸಿದ್ದಾಗಲೀ ಸತೀಪದ್ಧತಿಯನ್ನು ಕೊನೆಗೊಳಿಸಬೇಕೆಂದು ಚಳುವಳಿ ನಡೆಸಿದ್ದಾಗಲೀ, ಬಾಲ್ಯವಿವಾಹವನ್ನು ಖಂಡಿಸುವುದರಲ್ಲಾಗಲೀ ಬಳಕೆಯಲ್ಲಿದ್ದ ಹಿಂದೂಧರ್ಮದ ವೈಪರೀತ್ಯಗಳ ವಿರುದ್ಧ ಹೋರಾಡುವುದರಾಗಲೀ ಮೋಹನರಾಯ್ ಮಾಡಿದ್ದು ತಪ್ಪು ಎನ್ನುವಂತಿಲ್ಲ. ಆದರೆ ಇವೆಲ್ಲವು ಧಾರ್ಮಿಕ ಸಾಮಾಜಿಕ ಸುಧಾರಣೆಗಳಾಗುತ್ತವೆಯೇ ಹೊರತು ವೈಜ್ಞಾನಿಕ ಕ್ರಾಂತಿ ಎನಿಸಿಕೊಳ್ಳುವುದಿಲ್ಲ.

ಕುರುಡು ನಂಬಿಕೆಗಳ, ಅಪೌರುಷ ಕಲ್ಪನೆಗಳ, ಮೂರ್ಖ ಸಂಪ್ರದಾಯಗಳ ಮತ್ತು ಆಚರಣೆಗಳ ಕಾಡನ್ನು ಕತ್ತರಿಸುವುದರಿಂದ ಮೋಹನರಾಯ್ ತಮ್ಮ ಪ್ರಯತ್ನವನ್ನು ಪ್ರಾರಂಭಿಸಿದ್ದರೆ ವೈಜ್ಞಾನಿಕ ಕ್ರಾಂತಿಗೆ ಬೇಕಾದ ಪರಿಸರನ್ನು ನಿರ್ಮಾಣಮಾಡುವುದು ಅವರಿಗೆ ಸಾಧ್ಯವಾಗಬಹುದಾಗಿತ್ತು ಎನ್ನುವ ವಾದಕ್ಕೇನೋ ಅವಕಾಶವಿದೆ. ಈ ವಾದದಲ್ಲಿ ಸ್ವಲ್ಪಮಟ್ಟಿ ಸತ್ಯವೂ ಇದೆ. ಆದರೆ ಅತಿಮುಖ್ಯವಾದ ಎರಡು ಸಂಗತಿಗಳನ್ನು ನಾವು ಮರೆಯಕೂಡದು: ಸಮಾಜ ಸುಧಾರಣೆಯನ್ನು ಧಾರ್ಮಿಕ ನಂಬಿಕೆಗಳಿಂದ ಬೇರೆಯಾಗಿಯೇ ನೋಡುವುದು ಸಾಧ್ಯ. ಹಾಗೆ ಮಾಡುವುದು ಮುಖ್ಯ ಎನ್ನುವುದು ನನ್ನ ಅಭಿಪ್ರಾಯ. ಸಮಾಜ ಸುಧಾರಣೆಯ ಕ್ಷೇತ್ರದಲ್ಲಿ ದೈವವಾದಿಗಳಿಗಿಂತ ನಿರೀಶ್ವರವಾದಿಗಳು, ಆಜ್ಞೇಯತಾವಾದಿಗಳು ಹೆಚ್ಚಿನ ಯಶಸ್ಸುಗಳಿಸಿದ್ದಾರೆ ಎನ್ನುವುದಕ್ಕೆ ಹಲವಾರು ಉದಾಹರಣೆಗಳಿವೆ.

ಎರಡನೆಯದು: ನಾವು ಒಬ್ಬದೇವತೆಯನ್ನು ಪೂಜಿಸಲಿ 30 ಕೋಟಿ ದೇವತೆಗಳನ್ನು ಪೂಜಿಸಲಿ, ಮೂರ್ತಿ ಪೂಜೆಯನ್ನು ಒಪ್ಪಲಿ ಒಪ್ಪದಿರಲಿ, ಆರಾಧನೆಯ ಮೂಲವೆಂದರೆ ಧರ್ಮಶ್ರದ್ಧೆಯೇ ಹೊರತು ವೈಚಾರಿಕತೆಯಲ್ಲ; ವಿಧಾಯಕವೇ ಹೊರತು ಸ್ವಾತಂತ್ರ್ಯವಲ್ಲ. ಆರಾಧನೆಯಿಂದ ಪೋಷಿಸಲ್ಪಡುವ ದೃಷ್ಟಿಕೋನವು ವೈಜ್ಞಾನಿಕ ಕ್ರಾಂತಿಯನ್ನು ತರುವ ಪ್ರಯತ್ನಕ್ಕೆ ಪೋಷಕವಲ್ಲ. ಆದ್ದರಿಂದಲೇ ಧಾರ್ಮಿಕ ಸಂಘಟನೆಯನ್ನು ಕಟ್ಟುವ ಬದಲು ಧರ್ಮನಿರಪೇಕ್ಷ ಸಂಘಟನೆಯನ್ನು ಪ್ರಾರಂಭಿಸಿದ ದರೋಟಿಯೋನ ಪ್ರಯತ್ನವು ಔಚಿತ್ಯಪೂರ್ಣವಾಗಿತ್ತು.

ಯಾವುದೇ ಧರ್ಮಗ್ರಂಥವನ್ನು ಓದುವ ಬದಲು ಟಾಂಪೇನನ Age of reason ಕೃತಿಯನ್ನು ಓದುವಂತೆ ತನ್ನ ವಿದ್ಯಾರ್ಥಿ

ಗಳನ್ನು ಪ್ರೋತ್ಸಾಹಿಸುತ್ತಿದ್ದ ಅವನ ವಿಧಾನ ಅತ್ಯಂತ ಸೂಕ್ತ ಎನ್ನಬಹುದು. ಈ ದೃಷ್ಟಿಕೋನವನ್ನು ಸ್ವೀಕರಿಸಲು ಸಿದ್ಧರಿಲ್ಲದ ಕೆಲವರ ಮನಸ್ಸಿನಲ್ಲಿ ಇರಬಹುದಾದ ಪ್ರಶ್ನೆಗಳು ಇವು: ಯೂರೋಪಿನ ಪುನರುಜ್ಜೀವನ ಕಾಲವು ಪ್ರಾಚೀನ ಗ್ರೀಕರಿಂದ ಸ್ಫೂರ್ತಿಯನ್ನು ಪಡೆದಿರುವಾಗ ಇದೇ ರೀತಿಯ ಸ್ಫೂರ್ತಿಗಾಗಿ ನಾವು ಪ್ರಾಚೀನ ಭಾರತದತ್ತ ತಿರುಗಬೇಕು ಎನ್ನುವ ಮೋಹನರಾಯ್ ಅವರಲ್ಲಿ ಯಾವ ತಪ್ಪಿದೆ? ಉಪನಿಷತ್ತುಗಳು ಪ್ರಾಚೀನ ಭಾರತದ ಅತ್ಯುತ್ತಮ ಗ್ರಂಥಗಳಲ್ಲವೇ? ಉಪನಿಷತ್ತುಗಳು ವೇದಗಳ ಮತ್ತು ಬ್ರಾಹ್ಮಣಗಳಿಗಿಂತ ಭಿನ್ನ ಎನ್ನುವುದನ್ನು ನಾನು ಒಪ್ಪುತ್ತೇನೆ. ಹಾಗೆಯೇ ಉಪನಿಷತ್ತುಗಳಲ್ಲಿ ಪ್ರಶ್ನಿಸುವ ಮನೋವೃತ್ತಿಗೆ ಅವಕಾಶವಿದೆ ಎನ್ನುವುದನ್ನೂ ಒಪ್ಪುತ್ತೇನೆ. ಆದರೆ ಉಪನಿಷತ್ತುಗಳಲ್ಲಿ ಕೇಳಲಾಗಿರುವ ಪ್ರಶ್ನೆಗಳೇ ತಪ್ಪು.

ತಪ್ಪು ಪ್ರಶ್ನೆಗಳು ತಪ್ಪು ದಾರಿಗೆ ಎಳೆಯುತ್ತವೆಯೇ ಹೊರತು ಸರಿಯಾದ ಉತ್ತರಗಳಿಗೆ ದಾರಿ ಮಾಡಿಕೊಡುವುದಿಲ್ಲ. ತತ್ವಜ್ಞಾನದ ಇತಿಹಾಸವನ್ನು ವಸ್ತುನಿಷ್ಠವಾಗಿ ಓದಿದಾಗ ನಮಗೆ ತಿಳಿಯುವುದೇನೆಂದರೆ ಪ್ರತಿಯೊಂದು ಅಮೂಲ್ಯ ಸತ್ಯವು ಬೆಳಕಿಗೆ ಬಂದಿರುವುದು ಸರಿಯಾದ ಪ್ರಶ್ನೆಗಳನ್ನು ಸರಿಯಾಗಿ ಕೇಳುವುದರಿಂದ ಮಾತ್ರವೇ; ಉಪನಿಷತ್ತುಗಳ ಸಾರಸರ್ವಸ್ವವೆಂದು ಹೇಳಲಾಗುವ ವೇದಾಂತಗಳನ್ನು ನಿಸ್ಸಾರವಾದವು, ಎಂದು ಖಂಡಿಸಿದ ಮೇಲೆ ತನ್ನದೇ ಆದ ವಿಶೇಷ ರೀತಿಯ ವೇದಾಂತವನ್ನು ಮೋಹನರಾಯ್ ಪ್ರಚುರಗೊಳಿಸಬಾರದಾಗಿತ್ತು. ಏಕದೇವತಾವಾದದ ಬಹುಪಾಲು ಲಕ್ಷಣಗಳನ್ನೇ ಹೊಂದಿದ್ದ ಈ ರೀತಿಯ ವೇದಾಂತವು ಬ್ರಿಟನ್ ಮತ್ತು ಉತ್ತರ ಅಮೆರಿಕಾದ ಏಕದೇವತಾವಾದಿಗಳಿಂದ ಬಹುವಾಗಿ ಪ್ರಶಂಸಿಲ್ಪಟ್ಟಿತು. ಆದರೆ ಭಾರತದಲ್ಲಿ ಅದು ಮುಕ್ತ ಚಿಂತನೆಯನ್ನು ಜಡಗೊಳಿಸಿದ್ದಷ್ಟೇ ಅಲ್ಲದೆ ವೈಚಾರಿಕತೆಯನ್ನು ಅಪಮಾನಗೊಳಿಸುವಂತಹದ್ದಾಗಿತ್ತು. 19ನೇ ಶತಮಾನದ ಪೂರ್ವಾರ್ಧದಲ್ಲಿ ಭಾರತದ ಆಕಾಶದಲ್ಲಿ ಕಾಣಿಸಿಕೊಂಡ ಪುನರುಜ್ಜೀವನದ ಈ ಕಿರಣಗಳು ಅಲ್ಪ ಕಾಲದಲ್ಲೇ ಮಸುಕಾಗಿ ಹೋದವು.

ಮೋಹನರಾಯ್ ನಂತರ ದೇವೇಂದ್ರನಾಥರು ಬ್ರಹ್ಮವಾದವನ್ನು ಬಲಗೊಳಿಸಿದರು. ಕೇಶವ ಚಂದ್ರಸೇನ್ ಅದನ್ನು ರಾಷ್ಟ್ರೀಯ ಮಟ್ಟದ ಉಳ್ಳವರ ಚಳುವಳಿಯಾಗಿ ಮಾರ್ಪಡಿಸಿದರು. ಶಿವನಾಥಶಾಸ್ತ್ರಿ ಅದರ ತಳಹದಿಯನ್ನು ವಿಶಾಲಗೊಳಿಸಲು ಪ್ರಯತ್ನಿಸಿದರು. ಆವೇಳೆಗಾಗಲೆ ಸಮಾಜವು ಆದಿ ಸಮಾಜ, ನವವಿಧಾನ ಮತ್ತು ಸಾಧಾರಣಾ ಸಮಾಜ ಎಂದು ಮೂರು ಭಾಗವಾಗಿ ಒಡೆದಿತ್ತು. ರಾಜಕೀಯದಂತೆ ಧರ್ಮವೂ ಜನರನ್ನು ಒಡೆದಾಳುವ ಒಂದಂ ಶಕ್ತಿಯೇ. ಇಂದಿಲ್ಲ ನಾಳೆ ಅದು ತನ್ನ ಹಿಂಬಾಲಕರನ್ನು ಕಿತ್ತಾಡುವ ಕೋಮುಗಳಾಗಿ ವಿಭಾಗಿಸಿಬಿಡುತ್ತದೆ.

ಭಗವಂತನ ಪಿತೃತ್ವವನ್ನೂ, ಮಾನವನ ಸಹೋದರತ್ವವನ್ನೂ ಆದರ್ಶವನ್ನಾಗಿಟ್ಟುಕೊಂಡ ಬ್ರಹ್ಮಸಮಾಜವೂ ಕೂಡ ಈ ಸಾಮಾನ್ಯ ನಿಯಮಕ್ಕೆ ಹೊರತಾಗಲಿಲ್ಲ. ಉತ್ಕರ್ಷದ ಕಾಲದಲ್ಲಿ ಅದು ವಿದ್ಯಾಪ್ರಸಾರದಲ್ಲೂ, ಸ್ತ್ರೀ ವಿಮೋಚನೆಯಲ್ಲೂ, ಹಲವಾರು ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡುವುದರಲ್ಲೂ, ಹಾಗೂ ಪರೋಕ್ಷವಾಗಿಯಾದರೂ, ರಾಜಕೀಯ ಸ್ವಾತಂತ್ರ್ಯದ ಧ್ಯೇಯವನ್ನು ಬಲಗೊಳಿಸುವಲ್ಲೂ ವಹಿಸಿದ ಪಾತ್ರ ನಿಜಕ್ಕೂ ಪ್ರಮುಖವಾದ್ದು. ಕಲೆ, ಸಾಹಿತ್ಯ, ಸಂಸ್ಕೃತಗಳಿಗೂ ಅದರ ಕೊಡುಗೆ ಗಣನೀಯ. ಇವಾವನ್ನೂ ಅಲ್ಲಗಳೆಯುವಂತಿಲ್ಲ. ಆದರೆ ಇದರ ಸಾಧನೆಯು ಭಾರತೀಯ ಬದುಕು ಮತ್ತು ಚಿಂತನೆಗಳ ಮೇಲ್ಪೈ ಪದರವನ್ನು ಕೆರೆಯುವಷ್ಟರ ಮಟ್ಟಿಗೆ ಸೀಮಿತವಾಯಿತು.

ವೇದಗಳು ನಂಬಿಕೆಗೆ ಅರ್ಥವೋ ಅಲ್ಲವೋ, ಯಜ್ಞೋಪವೀತ ಧರಿಸಿ ಕುಳಿತ ಮತಾಚಾರ್ಯನು ಮಾಡಿದ್ದು ಸರಿಯೋ ತಪ್ಪೋ, ಗೀತೆಯು ಭರವಸೆ ನೀಡುವಂತೆ ಮರಣ ಕಾಲದಲ್ಲಿ 'ಓಂ' ಎನ್ನುವ ನಿಗೂಢ ಶಬ್ದವನ್ನು ಉಚ್ಚರಿಸುವುದರಿಂದ ಸ್ವರ್ಗಪ್ರಾಪ್ತಿಯಾಗುವುದೋ ಇಲ್ಲವೋ– ಇಂಥ ವಿಷಯಗಳ ಬಗ್ಗೆಯೇ ಗಂಭೀರ ಚರ್ಚೆಯನ್ನು ನಡೆಸಿದರೆ ಅದು ನಿಜವಾಗಿಯೂ ನಮ್ಮ ಬುದ್ಧಿಯನ್ನು ಸೃಜನಶೀಲ ಕ್ರಿಯೆಯಲ್ಲಿ ತೊಡಗಿಸಿವಂತಾಗುತ್ತದೆಯೋ? ಆದರೂ ನಾನು ಇಲ್ಲಿ ಹೇಳಿರುವ ಹಲವಾರು ಅರ್ಥಹೀನ ಸಂಗತಿಗಳು ಬ್ರಹ್ಮಸಮಾಜದ ಇತಿಹಾಸವನ್ನು ನೇಯ್ದ ಎಳೆಗಳಾಗಿವೆ, ಆದ್ದರಿಂದಲೇ ಬ್ರಹ್ಮಸಮಾಜವು ಪತನದ ಹಾದಿ ಹಿಡಿದದ್ದು ಆಶ್ಚರ್ಯದ ಸಂಗತಿಯೇನಲ್ಲ. ಒಂದೆರಡು ಪೀಳಿಗೆಗಳ ನಂತರ ತನ್ನ ಜನ್ಮಸ್ಥಳವಾದ ಬಂಗಾಳದಲ್ಲೇ ಇಲ್ಲದಂತಾಗಬಹುದು. ಅರುಣ್‌ಕುಮಾರ್ ಘೋಷ್ ಹೇಳುವಂತೆ "ಬ್ರಹ್ಮವಾದವು ಮುಂದುವರಿದ ಮೇಲಂತಸ್ತಿನ ಶ್ರೀಮಂತ ವರ್ಗದ ನೆಲದ ವಾಸನೆಯಿಲ್ಲದ ಬಂಗಾಳಿಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಿರುವಂತದ್ದು" ಈ ಕಾರಣದಿಂದ ಅದು ಪುನಶ್ಚೇತನಗೊಳ್ಳುವ ಸಾಧ್ಯತೆಯೇ ಇಲ್ಲ,

ಈಶ್ವರ ಚಂದ್ರ ವಿದ್ಯಾಸಾಗರರು ಬ್ರಹ್ಮಸಮಾಜದ ಅಧ್ವರ್ಯಗಳಂತಲ್ಲದೆ ಸಂಪ್ರದಾಯಸ್ಥ ಬ್ರಾಹ್ಮಣರಾಗಿ ಬದುಕಿದರು. ಆದರೆ ವೇದಾಂತಿಯಾಗಿರಲಿಲ್ಲ. ಅವರು ವೇದಗಳನ್ನು ಉಪನಿಷತ್ತುಗಳನ್ನು ಉಲ್ಲೇಖಿಸಿರುವುದು ಅಪರೂಪ. ಪೂಜೆಯಲ್ಲಾಗಲಿ ಅಥವಾ ಯಾವುದೇ ಪ್ರತಿಮೋದನೆಯಲ್ಲಾಗಲೀ, ಅವರು ಎಂದೂ ಸಮಯವನ್ನು ಹಾಳುಮಾಡಲಿಲ್ಲ. ರವೀಂದ್ರರ ಹಿರಿಯಣ್ಣನಾದ ದ್ವಿಜೇಂದ್ರನಾಥ ಟಾಗೋರರು ವಿದ್ಯಾಸಾಗರರನ್ನು ಅಜ್ಞೇಯತಾವಾದಿ ಎಂದೇ ಬಗೆದಿದ್ದರು. ವಿದ್ಯಾಸಾಗರರ ಶಿಷ್ಯ ಕೃಷ್ಣಕಮಲ್ ಭಟ್ಟಾಚಾರ್ಯರು ತಮ್ಮ ಗುರುಗಳು ನಿರೀಶ್ವರವಾದಿಯೆಂದು ಹೇಳುತ್ತಿದ್ದರು. ಬ್ರಹ್ಮಸಮಾಜದ ಅಧ್ವರ್ಯಗಳಲ್ಲಿ ಅನೇಕರು ಇವರ ಸ್ನೇಹಿತರಾಗಿದ್ದರೂ ಸಹ, ಇವರು ಆ ಸಮಾಜವನ್ನು ಸೇರಲು ಇಚ್ಛಿಸಲಿಲ್ಲ. ಬಂಗಾಳದ ಅಜ್ಞೇಯತಾವಾದಿಗಳೆಲ್ಲರ ನಿಕಟ ಪರಿಚಯವಿದ್ದರೂ ಅವರ ಸಂಘಟನೆಯ ಚಟುವಟಿಕೆಗಳಲ್ಲಿ ಭಾಗವಹಿಸುವ ಉತ್ಸಾಹ ತೋರಲಿಲ್ಲ. 9 ರಾಮಕೃಷ್ಣ ಪರಮಹಂಸರ ದರ್ಶನಕ್ಕಾಗಿ ಜನ ಹಾತೊರೆತ್ತಿದ್ದ ಕಾಲದಲ್ಲಿ ವಿದ್ಯಾಸಾಗರರು ಅವರನ್ನು ನೋಡಲು ಹೋಗಲಿಲ್ಲ.

ರಾಮಕೃಷ್ಣರೇ ಅವರನ್ನು ಭೇಟಿಯಾದಾಗ ಯಾವುದೇ ರೀತಿಯ ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸಲು ಸೌಜನ್ಯ ಪೂರ್ವಕವಾಗಿಯೇ ವಿದ್ಯಾಸಾಗರರು ನಿರಾಕರಿಸಿದರು. ಇವೆಲ್ಲವೂ ಕೂಡ ಅವರು ವೈಚಾರಿಕತೆ ಮತ್ತು ಮನುಷ್ಯನ ಪರವಾಗಿದ್ದರೇ ಹೊರತು. ದೇವರು

ಬ್ರಹ್ಮವಾದವು ಮೇಲಂತಸ್ತಿನ ಶ್ರೀಮಂತವರ್ಗದ, ನೆಲದ ವಾಸನೆ ಇಲ್ಲದ, ಬಂಗಾಳಿಗಳಿಗೆ ಮಾತ್ರ ಪ್ರಭಾವ ಭೀರುವಂತದ್ದು.

ಮತ್ತು ದಿವ್ಯ ದರ್ಶನದ ಪರವಾಗಿರಲಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತವೆ. ಅವರು ಸ್ತ್ರೀಯರ ವಿದ್ಯಾಭ್ಯಾಸ, ಮತ್ತು ವಿಧವಾ ವಿವಾಹದಂತಹ ಚಟುವಟಿಕೆಗಳಿಗೆ ಮಾತ್ರವೇ ತಮ್ಮನ್ನು ಸೀಮಿತಗೊಳಿಸಿಕೊಂಡದ್ದು ವಿಷಾದದ ಸಂಗತಿ. ಅವರೇನಾದರೂ ಹೆಚ್ಚು ವ್ಯಾಪಕವಾದ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರೆ ಭಾರತೀಯ ಪುನರುಜ್ಜೀವನ ಚಳುವಳಿಯು ತುಳಿದಿದ್ದ ತಪ್ಪು ಹಾದಿಯನ್ನು ನಿವಾರಿಸುವಲ್ಲಿ ಯಶಸ್ವಿಯಾಗಬಹುದಿತ್ತು.

"ಯುವ ಬಂಗಾಳ' ಚಳುವಳಿಯು ಕ್ಷೀಣಿಸಲು ಇದ್ದ ಪ್ರಮುಖ ಕಾರಣಗಳಲ್ಲಿ ಒಂದೆಂದರೆ ಬೆರೋಜಿಯನ್ನರು ಭಾರತೀಯ ಪರಂಪರೆ ಮತ್ತು ನಾಗರೀಕತೆಗಳ ಸ್ವಭಾವದ ಪೂರ್ಣ ಪರಿಚಯವಿಲ್ಲದವರಾಗಿದ್ದರು. ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ, ಧಾರ್ಮಿಕ ಮತ್ತು ಧರ್ಮಾತೀತ ಪರಂಪರೆಗಳಲ್ಲೂ ಪ್ರಖ್ಯಾತ ಪಂಡಿತರಾಗಿದ್ದ ಮತ್ತು ಪಶ್ಚಿಮದ ತತ್ವಶಾಸ್ತ್ರಗಳ ಆಳವಾದ ಜ್ಞಾನವಿದ್ದ ವಿದ್ಯಾಸಾಗರರು ದೆರೋಜಿಯನ್ನರಿಗೆ ಸೂಕ್ತ ಮಾರ್ಗದರ್ಶಿಯಾಗಬಹುದಾಗಿತ್ತು. ಆದರೂ ಅವರೇಕೆ ಹಿಂದೆಗೆದರು? ನನಗನ್ನಿಸುವಂತೆ ಜನರ ಜತೆಗಿನ ತಮ್ಮ ವ್ಯವಹಾರದಲ್ಲಿ ಬಹಳಷ್ಟು ಸಲ ಭ್ರಮೆ ನಿರಸನ ಹೊಂದಿದ್ದೇ ಇದಕ್ಕೆ ಕಾರಣವಾಗಿರಬಹುದು. ಅವರಿಂದ ಎಲ್ಲರೀತಿಯ ಸಹಾಯ ಪಡೆದವರು ಕಡೆಯ ವೇಳೆಗೆ ಅವರನ್ನು ಕೈಬಿಟ್ಟರೂ ಅವರು ಸಿನಿಕರಾಗಲಿಲ್ಲ. ಅಥವಾ ದುರ್ಬಲರ, ಬಡವರ ಮತ್ತು ಅಸಹಾಯಕರ ಸೇವೆ ಮಾಡುವುದನ್ನು ನಿಲ್ಲಿಸಲಿಲ್ಲ. ಯಾವ ರೀತಿಯಿಂದ ನೋಡಿದರೂ ಅವರೊಬ್ಬ ಮಹಾನ್ ವ್ಯಕ್ತಿ. ಸ್ವತಂತ್ರ ಭಾರತದ ಸಂದರ್ಭದಲ್ಲಿ ಕೂಡ ನಮ್ಮ ಹಲವರಲ್ಲಿ ಕಾಣಸಿಗದ ಪ್ರಬಲವಾದ ಸ್ವತಂತ್ರ್ಯ ಚೈತನ್ಯ ಅವರದಾಗಿತ್ತು. ಮನುಷ್ಯರ ನಡುವಿನ ಅಸಮಾನತೆಯು ದೈವದತ್ತವಾದುದ್ದು ಎನ್ನುವ ಕಾಲದಲ್ಲಿ ಅವರು ಮಾನವಾತವಾದಿಯೂ ಸಮಾನತಾವಾದಿಯೂ ಆಗಿದ್ದರು. ಆ ಕಾಲದ ಶ್ರೇಷ್ಠ ಸಂಸ್ಕೃತ ವಿದ್ವಾಂಸರಾಗಿದ್ದರೂ (ವಿದ್ಯಾಸಾಗರ ಎನ್ನುವುದು ಅದರ ಹೆಸರಿನ ಭಾಗವಾಗಿರದೆ ಸಂಸ್ಕೃತದ ಮೇಲೆ ಅವರು ಸಾಧಿಸಿದ ಪಾಂಡಿತ್ಯ ಪದವಿ ಸೂಚಕವಾಗಿತ್ತು.) ನಾವು ಇಂಗ್ಲೀಷ್ ಮತ್ತಿತರ ಯೂರೋಪಿಯನ್ ಭಾಷೆಗಳನ್ನು ಕಲಿಯದಿದ್ದರೆ ಆಧುನಿಕ ವಿಚಾರಗಳನ್ನು ತಿಳಿಯುವುದಾಗಲಿ, ಆಧುನಿಕಯುಗಕ್ಕೆ ಪ್ರವೇಶಿಸುವುದಾಗಲಿ ಸಾಧ್ಯವಿಲ್ಲ ಎಂಬುದು ಅದರ ಸ್ಪಷ್ಟ ಅಭಿಪ್ರಾಯವಾಗಿತ್ತು.

ಪೌರಾಣಿಕ ಹಿಂಧೂ ಧರ್ಮವು ಯಾವುದೇ ಧರ್ಮಕ್ಕಿಂತ ಬಾಲಿಶವಾದದ್ದು. ಅದು ಸೃಷ್ಟಿಸದ ಮೂಢನಂಬಿಕೆಗಳಿಲ್ಲ. ಘೋಷಿಸದ ಮೂರ್ಖತನಗಳಿಲ್ಲ. ಜಾತಿಪದ್ಧತಿ ಅಸ್ಪೃಶ್ಯತೆ ವಿಧವಾವಿವಾಹ ಹಾಗೂ ಆಹಾರಪದ್ಧತಿ ನಿಷೇಧಗಳು ಬಳಕೆಯಲ್ಲಿರುವ ಇತರ ಲಕ್ಷಣಗಳಿಗೆ ವೇದದಲ್ಲಿ ಪರವಾನಗಿ ಇರಲಿಲ್ಲ.

ದಯಾನಂದ ಸರಸ್ವತಿಯವರು ಸಂಸ್ಕೃತ ಪಾಂಡಿತ್ಯದಲ್ಲಿ ವಿದ್ಯಾಸಾಗರರಿಗಿಂತ ಕಡಿಮೆ ಇರಲಿಲ್ಲ. ಅಲ್ಲದೆ ಹೆಚ್ಚು ಧರ್ಮೋತ್ಸಾಹವುಳ್ಳವರೂ, ಧೈರ್ಯವಾಗಿ ಮುನ್ನುಗ್ಗಬಲ್ಲವರೂ ಆಗಿದ್ದರು. ಮಹಾಕಾವ್ಯಗಳು ಹಾಗೂ ಪುರಾಣಗಳು ಸೇರಿದಂತೆ ಬಳಕೆಯಲ್ಲಿರುವ ಹಿಂದೂ ಧರ್ಮವನ್ನು ಬೇರು ಸಹಿತ ಕಿತ್ತು ಹಾಕಬೇಕೆಂಬುದೂ, ವೇದಾಂತದ ಜೊತೆಗೆ-ಉಪನಿಷತ್ತುಗಳನ್ನು ಬ್ರಹ್ಮ ಸೂತ್ರಗಳನ್ನು, ಭಗವದ್ಗೀತೆಯನ್ನು ನಿರಾಕರಿಸುವುದೂ, ವೈದಿಕಯುಗವನ್ನು ಪುನಃ ಸ್ಥಾಪಿಸುವುದೂ ಅವರ ಜೀವನೋದ್ದೇಶವಾಗಿತ್ತು. "ಜಾತಿಪದ್ಧತಿ, ಅಸ್ಪೃಶ್ಯತೆ, ವಿಧವಾ ವಿವಾಹ ಹಾಗೂ ಆಹಾರ ಪದ್ಧತಿಗಳನ್ನು ಕುರಿತ ನಿಷೇಧಗಳು ಮತ್ತು ಬಳಕೆಯಲ್ಲಿರುವ ಹಿಂದೂಧರ್ಮದ ಇತರ ಲಕ್ಷಣಗಳಿಗೆ ವೇದಗಳಲ್ಲಿ ಪರವಾನಗಿ ಇರಲಿಲ್ಲ. "10 ಎನ್ನುವ ದಯಾನಂದರ ಅಭಿಪ್ರಾಯವು ಸೂಕ್ತವಾಗಿತ್ತು. ಪೌರಾಣಿಕ ಹಿಂದೂಧರ್ಮವು ಯಾವುವೇ ಧರ್ಮಕ್ಕಿ"ಂತ ಬಾಲಿಶವಾದುದ್ದು, ಅದು ಸೃಷ್ಟಿಸದ ಮೂಢನಂಬಿಕೆಗಳಿಲ್ಲ. ಅದು ಘೋಷಿಸದ ಮೂರ್ಖತನಗಳಿಲ್ಲ ಎನ್ನುವ ಅವರ ಅಭಿಪ್ರಾಯಗಳು ಒಪ್ಪುವಂಥವು.

ಪೌರಾಣಿಕ ಹಿಂದೂಧರ್ಮದ ಬಗ್ಗೆ ದಯಾನಂದರಲ್ಲಿದ್ದ ತುಚ್ಛಭಾವನೆಯು ಅವರನ್ನು, ವಿಜ್ಞಾನವೂ ಸೇರಿ ಎಲ್ಲ ಜ್ಞಾನವನ್ನೂ ಒಳಗೊಂಡಿರುವ ವೇದಗಳು ಭಗವಂತನಿಂದಲೆ ನಿರ್ಮಾಣಗೊಂಡವು ಎನ್ನುವ ಮತ್ತೊಂದು ಅತಿರೇಕಕ್ಕೆ ಎಳೆದುಕೊಂಡು ಹೋಯಿತು ಎನ್ನುವುದು ನಿಜಕ್ಕೂ ಶೋಚನೀಯ, ಅರವಿಂದರು ಸಹ ವೇದಗಳ ಬಗ್ಗೆ ದಯಾನಂದರ ಮಾತುಗಳನ್ನೇ ಅನುಮೋದಿಸಿದರು.

"ಆಧುನಿಕ ಕಾಲದ ಭೌತಿಕ ವಿಜ್ಞಾನದ ಸತ್ಯಗಳನ್ನು ನಮ್ಮ ಶ್ಲೋಕಗಳಲ್ಲೇ ಗುರ್ತಿಸಬಹುದು ಎಂದು ದಯಾನಂದರು ಹೇಳುತ್ತಾರೆ. ಸಮರ್ಥಿಸಬಹುದಾದಂತಹ ಅನುಮಾನಗಳು ವ್ಯಕ್ತಪಡಿಸಬಹುದಾದ ಮೂಲಭೂತ ತತ್ವದ ಮುಖ್ಯಾಂಶವನ್ನೂ ನಾವು ಕಾಣಬಹುದು. ಈ ವಿಷಯದಲ್ಲಿ ವಿದ್ವತ್ಪೂರ್ಣವಾದ ಅಭಿಪ್ರಾಯವನ್ನೂ ಕೊಡುವಷ್ಟು ಪಾಂಡಿತ್ಯ ನನ್ನದಲ್ಲ. ಆದರೆ ಪ್ರಾಚೀನ ಜಗತ್ತಿನ ಬಗೆಗಿನ ನಮ್ಮ ಇತ್ತೀಚಿನ ತಿಳುವಳಿಕೆಯ ಕ್ರಮವನ್ನು ಗಮನಿಸಿದರೆ ಈ ವಿಚಾರವು ಸಮರ್ಥನಿಯವಾಗಿ ಕಾಣುತ್ತದೆ.

ಪ್ರಾಚೀನ ನಾಗರಿಕತೆಯು ಹಲವು ವೈಜ್ಞಾನಿಕ ರಹಸ್ಯಗಳನ್ನು ತಿಳಿದಿತ್ತು, ಅವುಗಳಲ್ಲಿ ಕೆಲವನ್ನು ಮಾತ್ರ ಆಧುನಿಕರು ಪಡೆದು, ವಿಸ್ಮರಿಸಿ, ಸಂಕ್ಷಿಪ್ತವೂ ಆಗುವಂತೆ ಮಾಡಿದ್ದಾರೆ. ಇನ್ನು ಕೆಲವಂತೂ ಈಗಲೂ ನಮಗೆ ದೊರಕಿಲ್ಲ. ಇದನ್ನು ನೋಡಿದರೆ ವೇದವು ವೈಜ್ಞಾನಿಕ ಸತ್ಯ ಮತ್ತು ಧಾರ್ಮಿಕ ಸತ್ಯಗಳನ್ನು ಮೈಗೂಡಿಸಿಕೊಂಡರೆ, ಎನ್ನುವ ದಯಾನಂದರ ವಿಚಾರಗಳು ಆಶ್ಚರ್ಯಕರವಾಗಿ ಕಾಣಿಸುವುದಿಲ್ಲ. ಆಧುನಿಕರಿಗೆ ತಿಳಿಯದೇ ಇರುವ ಹಲವಾರು ವೈಜ್ಞಾನಿಕ ಸತ್ಯಗಳನ್ನು ವೇದಗಳಲ್ಲಿ ಕಾಣಬಹುದು ಎಂಬ ಅಚಲವಾದ ನಂಬಿಕೆ ನನ್ನದು ಹೀಗಿರುವಲ್ಲಿ ದಯಾನಂದರು ವೈದಿಕ ಜ್ಞಾನ ಸಂಪತ್ತಿನ ಆಳ ಮತ್ತು ವಿಸ್ತಾರದ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ ಎನ್ನುವುದಕ್ಕಿಂತ, ಹೇಳಬೇಕಾದ್ದಕ್ಕಿಂತ ಕಡಿಮೆಯೇ ಹೇಳಿದ್ದಾರೆ ಎನಿಸುತ್ತದೆ."ಯುಗ್ವೇದದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಅದು ಸಂಕೇತಗಳ ಮೂಲಕ ಸತ್ಯವಾದವನ್ನು ಕುರಿತ ಶ್ರೇಷ್ಠಗ್ರಂಥ.

(ಮುಂದುವರೆಯುವುದು)

ಎರಡು ಕವನಗಳು

ಪ್ರಕ್ಷೋಭ

ನಿಗಿ ನಿಗಿ ಕೆಂಡ ನನ್ನ ಕಣ್ಣು
ಮನಸ್ಸಿನ ತುಂಬ ಹಿರೋಶಿಮಾ
ಹಣೆಯಲ್ಲಿ ಮೃತ್ಯುವಿನ ಛಾಯೆ
ರಕ್ತ ಬಿಸಿ ಲಾವಾರಸ

ದೂರದವರೆಗೆಲ್ಲೂ ಮನುಷ್ಯನ ಸುಳಿವಿಲ್ಲ
ಗೋಡೆ ಕೆದಕುತ್ತಿದೆ ಹೆಗ್ಗಣ
ಕೈ ಕಾಲಿಗೆ ಬೇಡಿ

ಎಲ್ಲಿಯವರೆಗೆ ಉರುವಿಯರೋ ನನ್ನ ಮುಂದೆ
ಎಲ್ಲಿಯವರೆಗೆ ಜಗ್ಗುವಿರಿ ನನ್ನ ಕಾಲು
ಎಲ್ಲಿಯವರೆಗೆ ಹಿಂಡುವಿರಿ ನನ್ನ

ನಿಂತೇ ನಿಲ್ಲುವಿರಿ: ಬೇಡಿ ಕರಗಿದ ಮೇಲೆ
ಹಿರೋಶಿಮಕ್ಕೆ ಹಚ್ಚುವೆ ಕಿಚ್ಚು
ಉಕ್ಕಿಸುವೆ ಎಲ್ಲೆಡೆ ಲಾವರಸ.

● **ಸರಜೂ ಕಾಟಕರ್**

ಸ್ವಾತಂತ್ರ್ಯಕ್ಕಾಗಿ

ಹೆಮ್ಮೆ ನನಗೆ ಹೀಗಿರುವುದಕ್ಕೆ
ಎದೆ ತಟ್ಟಿಕೊಳ್ಳುವೆ ನಾನು ಮಾಡಿದ್ದಕ್ಕೆಲ್ಲ
ಮಳೆಯಂತೆ ನನ್ನ ನಾಡಿನ ಮೇಲೆ
ಚೆಲ್ಲಿರುವುದು ನನ್ನ ರಕ್ತ
ನಾನು ಹೊರಟಿರುವೆ ಬಿಡುಗಡೆಗಾಗಿ
ಬಂದೀಖಾನೆಯಿಂದ
ಇರುವುದೊಂದು ಬದುಕು ಕೊಡುವೆ
ಸ್ವಾತಂತ್ರ್ಯಕ್ಕಾಗಿ.

● **ಬೆಂಜಮಿನ್ ಮೊಲಾಯಿಸ್**

ಅನುವಾದ : ರಂಜಾನ್‌ದರ್ಗಾ

ಬೆಂಜಮಿನ್ ಮೊಲಾಯಿಸ್ ನೇಣುಗಂಬ ವೇರಿದ ಹಿಂದಿನ ರಾತ್ರಿ ಬರೆದ ಕೊನೆಯ ಕವನ.

ಒಂದು ಪತ್ರ

ಈ ಮಣ್ಣಿಗೇಕೆ...?

ಮಾನ್ಯರೇ,

ಇದೊಂದು ಪತ್ರಿಕೆ "ಪಂಚಮ"ವಯಸ್ಸು ಗೊತ್ತಿಲ್ಲ. ಬದುಕಿನ ಕ್ರೌರ್ಯ ಬಯಲು ಮಾಡುತ್ತೇವೆಂದು ಬಂದ ಎಷ್ಟೊ ಪತ್ರಿಕೆಗಳು ಬಣ್ಣ ಕಟ್ಟಿಕೊಳ್ಳುತ್ತಿವೆ. ಇಂತ ಎಷ್ಟೊ ಪತ್ರಿಕೆಗಳ ಹಿರಿಯ ಪಂಚಮ ಏಕೆ ನಮ್ಮ ಕಣ್ಣು ಕಟ್ಟಿಸುತ್ತಿದೆ. ಯಾವುದೋ ಒಂದೊಂದು ಮುಲಾಜಿನಲ್ಲಿ ಇಂದಿನ ಪತ್ರಿಕೆಗಳು ಮರುಗುತ್ತಿರುತ್ತವೆ. ಇದು ಪಂಚಮ ಲೆಕ್ಕಕ್ಕೆ ಸಿಗಲಾರದ ಮಾತು.

ಕನಸಿನಲ್ಲೂ ಕಟ್ಟದ ಕಥೆ"ದಲಿತ ಸಂಘರ್ಷ ಸಮಿತಿ" ಹುಟ್ಟು. ಇದರ ಅಂಗಗಳಾದ ದಲಿತ ವಿದ್ಯಾರ್ಥಿ ಒಕ್ಕೂಟ, ಮಹಿಳಾ ಒಕ್ಕೂಟಗಳಂತೆ "ಪ್ರಕಾಶನ" ಭಾಗವೂ ಒಂದು ಅಂಗ. ಇದು ಇತ್ತೀಚೆಗೆ ನನಗೆ ಗೊತ್ತಾದ ಮಾತು.

ದಲಿತ ಪ್ರಕಾಶನದ ಮೊದಲ ಕೂಸೇ "ಪಂಚಮ" ಎಂದುಕೊಂಡಿದ್ದೇನೆ. ನೋವುಳ್ಳವರ ಸಾಂತ್ವನ, ನಿವಾರಣೆ ದಾರಿಗಳ ನೈಜ ಎದೆಗಾರಿಕೆ ಕಾರ್ಯ ಹೊತ್ತ ಪಂಚಮ ನನ್ನೂ ತನ್ನ ಮಡಲಲ್ಲಿ ಬೆಳಸಿತ್ತು. ಆದರೆ ಬದುಕುವಾಗ......? ನಮ್ಮದೇ ಆದ ಬದುಕಿನ ಸ್ವಾಭಿಮಾನ ಹುಟ್ಟಿಸುತ್ತಿದ್ದ ಪಂಚಮ ಒಂದು ಸಾಹಿತ್ಯವನ್ನೇ ಸೃಷ್ಟಿಸಿತು. ಪಂಚಮ

ದಲಿತರ ಪ್ರಪಂಚ ಪಂಚಮ ಏನಾಗುತ್ತಿದೆ? ಪ್ರಜ್ಞಾವಂತರಾಗುವ ದಲಿತ ವಿದ್ಯಾರ್ಥಿಗಳೇಕೆ ಸುಮ್ಮನಿದ್ದಾರೆ?

ಮಣ್ಣಿನ ಜನರ ಪಂಚಮ ಮಣ್ಣಾಗುವುದಕ್ಕೆ ಎಲ್ಲ ಹಿರಿಯರಿಗೂ ಒಪ್ಪಿಗೆಯೇ?

ಹೀಗಾಗಬೇಕಾದರೆ ಅದೆಷ್ಟು ಜನ ಚೈತನ್ಯಶೀಲರು ದುಡಿದಿದ್ದರು.

"ಆದರೆ ಈಗ ಪಂಚಮ ಏನಾಗಿದೆ? ಪಂಚಮಕ್ಕೆ ಏನಾಗುತ್ತಿದೆ. ಗೊತ್ತಿಲ್ಲ....!! ಅದು ದಲಿತನ ಪ್ರಪಂಚ. ಅದಕ್ಕೇ ಪರಪಂಚವೇ! ಎಲ್ಲ ಪಂಚಮ ಹಿರಿಯರಿಗೆ ಈ ಸ್ಥಿತಿ ಒಪ್ಪಿಗೆಯೇ? ಚೈತನ್ಯ ಶೀಲರೆಲ್ಲಾ ಪಲಾಯನ ಮಾಡಿದ್ದಾರೆಯೇ? ಪ್ರಜ್ಞಾವಂತರಾಗುವ ದಲಿತ ವಿದ್ಯಾರ್ಥಿಗಳೇಕೆ ಸುಮ್ಮನಾಗುತ್ತಿದ್ದಾರೆ? ಇವೆಲ್ಲ, ಮಿಕ್ಕವುಗಳೆಲ್ಲಕ್ಕಿಂತ ಮುಖ್ಯವಾಗಿ ನಮಗೆ ಪಂಚಮ ಬೇಕು.

ಯಾವ ಅತಿರಥರ ಬಾಣಗಳು ಎಲ್ಲಿ ಸಿಕ್ಕಿಹಾಕಿಕೊಂಡಿದ್ದರೆ ನಮಗೇನಾಗಬೇಕಿದೆ. ಅಂದರೆ ಪಂಚಮದ ಕಷ್ಟ ಬೇಡ ಎಂದಲ್ಲ.

ಹಿರಿಯರೇ ನಮ್ಮ ಬದುಕಿನಲ್ಲೇನಿದೆ? ನೀ ಹೇಳಿದಂತೆ "ಅದು ಬರೀ ಮಣ್ಣು. ಆ ಮಣ್ಣೇ ನನ್ನ ಪಂಚಮ. ಮಣ್ಣಿನ ಜನರ ನುಡಿ- ನೋವನ್ನೇ ನಲಿಸಬೇಕಾದ ಪಂಚಮ ಏಕೆ ನಮ್ಮ ಒಡಲಿನಲ್ಲಿ ನುಲಿಯುತ್ತಿದೆ? ಮಣ್ಣೇ ನಮ್ಮ ಹಕ್ಕು. ಅಲ್ಲವೆ?

"ಈ ನಮ್ಮ ಸ್ವಾಭಿಮಾನಕ್ಕೇಕೆ ಪರಪಂಚ".

ಮಾತನಾಡುವುದೇ ಪಂಚಮ ನಮ್ಮ ಮಣ್ಣಿನಲ್ಲಿ ನಾವು ಮಣ್ಣಾಗುತ್ತಿರುವಾಗ.

● **ಅಗಳಕುಪ್ಪೆ ಸಿದ್ದಯ್ಯ**

ಯಾವುದೇ ಮಗುವೂ ಪರಿಪೂರ್ಣ ಪಾಲನೆಯಿಂದ ವಂಚಿತರಾಗಬಾರದು.

ಆದಕಾರಣ, ಈ ಸಮಗ್ರ ಬಾಲವಿಕಾಸ ಯೋಜನೆ.

ಪುಷ್ಟಿಕರ ಆಹಾರ, ಔಷಧೋಪಚಾರ ಹಾಗೂ ಸಾಕ್ಷರತೆ, ಪ್ರತಿ ಮಗುವಿನ ಅಜನ್ಮ ಹಕ್ಕು ಈ ಪುಟಾಣಿ ಪ್ರಜೆಗಳ ಸರ್ವತೋಮುಖಿ ಅಭಿವೃದ್ಧಿಗೆಂದು ರಾಜ್ಯ ಸರ್ಕಾರ 6 ವರ್ಷದೊಳಗಿನ ಮಕ್ಕಳಿಗಾಗಿ ಒಂದು ಸಮಗ್ರ ಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮದಲ್ಲಿ ಲಭಿಸುವ ಸೇವೆಗಳೆಂದರೆ:

ರೋಗ ನಿರೋಧಕಗಳು:

ಟ್ರಿಪಲ್ ಅಂಟಿಜೆನ್, ಬಿಸಿಜಿ, ಪೋಲಿಯೋ, ನಿರೋಧಕ ಚುಚ್ಚುಮದ್ದು ಹಾಗೂ ಇನ್ನಿತರ ರೋಗ ನಿರೋಧಕಗಳನ್ನು ನೀಡುವುದು.

ಆರೋಗ್ಯ:

ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರ ಮೂಲಕ ವೈದ್ಯಕೀಯ ಸೇವೆ, ಹಾಗೂ ಮಾರ್ಗದರ್ಶನ.

ಆಹಾರ:

ಅಂಗನವಾಡಿ ಕೇಂದ್ರಗಳ ಮೂಲಕ ಪುಷ್ಟಿದಾಯಕ ಹಾಗೂ ಸಮತೋಲನ ಆಹಾರ ನೀಡುವಿಕೆ.

ವಿದ್ಯಾಭ್ಯಾಸ:

ಅಂಗನವಾಡಿಗಳಲ್ಲಿ 6 ವರ್ಷದ ಒಳಗಿನ ಮಕ್ಕಳಿಗೆ ಅನೌಪಚಾರಿಕ ವಿದ್ಯಾಭ್ಯಾಸ.

ಗರ್ಭಿಣಿಯರು ಹಾಗೂ ಬಾಣಂತಿಯರು:

ಶಿಶುಗಳ ಪಾಲನೆ ಪೋಷಣೆ ಬಗ್ಗೆ ಗರ್ಭಿಣಿಯರು ಹಾಗೂ ಬಾಣಂತಿಯರಿಗೆ ಸೂಕ್ತ ತಿಳುವಳಿಕೆ ನೀಡಿ ಮಕ್ಕಳ ಯೋಗ್ಯ ಪಾಲನೆ. ಆಹಾರ ಕ್ರಮ ಹಾಗೂ ಸಾಮಾನ್ಯ ಆರೋಗ್ಯ ರಕ್ಷಣೆ ಬಗ್ಗೆ ಮಾರ್ಗದರ್ಶನ.

ನಿರ್ದೇಶನ ಸೇವೆಗಳು:

ಶಿಶುಗಳ. ಮಾತೆಯರ ಆರೋಗ್ಯ ಸಂಬಂಧವಾದ ಗಂಭೀರ ಪರಿಸ್ಥಿತಿಗಳಲ್ಲಿ ಅವರನ್ನು ಆಸ್ಪತ್ರೆಗಳು ಹಾಗೂ ಇತರ ತಜ್ಞರ ಸಂಸ್ಥೆಗಳಿಗೆ ಸೇರಿಸಿ ಯೋಗ್ಯ ಚಿಕಿತ್ಸೆ ದೊರಕುವಂತೆ ಮಾಡುವುದು.

ಸೂಕ್ತ ತರಬೇತಿ ಪಡೆದ ಅಂಗನವಾಡಿ ಕಾರ್ಯಕರ್ತರುಗಳು ಮತ್ತು ಸಹಾಯಕರಿಂದ ಅಂಗನವಾಡಿ ಕೇಂದ್ರಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ಬಾಲವಿಕಾಸ ಯೋಜನಾಧಿಕಾರಿಗಳು ಈ ಕೇಂದ್ರಗಳ ಕಾರ್ಯಕರ್ತರು ಮೇಲ್ವಿಚಾರಣೆ ನಡೆಸುವರು.

ಪೂರ್ಣ ವಿವರ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವ ಬ್ಲಾಕ್‌ನ
ಬಾಲ ವಿಕಾಸ ಯೋಜನಾಧಿಕಾರಿಗಳು ಅಥವಾ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ಗಳು.

ಅಸಹಾಯಕರಿಗೊಂದು ಸಹಾಯದ ಯೋಜನೆ

“ಕರ್ನಾಟಕ ವಾರ್ತೆ”

ಸಂಘಟನೆ ಮತ್ತು ಹೋರಾಟ

ಗೋಪಾಲಪುರ

ಬೆಂಗಳೂರು ಗ್ರಾಮಾಂತರಜಿಲ್ಲೆ ನೆಲಮಂಗಲ ತಾ॥ ಗೋಪಾಲಪುರ ಗ್ರಾಮ ಶಾಖೆಯನ್ನು 20–8–87ರಂದು ಉದ್ಘಾಟಿಸಲಾಯಿತು. ನೆಲಮಂಗಲ ತಾ॥ ಸಂಚಾಲಕ ರಾಮಪ್ಪ, ಸಂ॥ ಸಂ॥ ಸಿದ್ದಗಂಗಯ್ಯ ಹಾಗೂ ಜಿಲ್ಲಾ ಕಲಾ ಮಂಡಲಿ ಸಂಚಾಲಕ ಶಂಕರ್ ಮಾವಳ್ಳಿ ಮುಖ್ಯ ಅತಿಥಿಗಳಾಗಿದ್ದರು.

ಕಲಿದೇವಪುರ

ತಮಕೂರು ಜಿಲ್ಲೆ ಮಧುಗಿರಿ ತಾ॥ ಕಲಿದೇವಪುರ ಗ್ರಾಮಶಾಖೆ ಉದ್ಘಾಟನೆ 21-8-87ರಂದು ನಡೆಯಿತು. ಮಧುಗಿರಿತಾ॥ ಸಂ॥ಸಂ॥ ಹನುಮಯ್ಯ, ಖಜಾಂಚಿ ಡಿ.ಕೆ. ನರಸಿಂಹಮೂರ್ತಿ, ಎಸ್ .ಡಿ. ಮಾಗರ್ ಮುಖ್ಯ ಅತಿಥಿಗಳಾಗಿದ್ದರು. ಗ್ರಾಮ ಶಾಖೆಗೆ, ದೊಡ್ಡಹನುಮಯ್ಯ–ಸಂಚಾಲಕ, ಸಂಜೀವ ರಾಯಪ್ಪ-ಸಂಘಟನಾ ಸಂಚಾಲಕ. ಹನುಮಂತರಾಯಪ್ಪ–ಖಜಾಂಚಿ ಹಾಗೂ ದಲಿತ ಮಹಿಳಾ ಒಕ್ಕೂಟದ ಪದಾಧಿಕಾರಿಗಳಾಗಿ ಕು॥ ಅಂಜನಮ್ಮ ಮತ್ತು ಕು॥ ಸುವರ್ಣಮ್ಮ ಆಯ್ಕೆಯಾಗಿದ್ದಾರೆ.

ತಿಂಗಳೂರು

ಇದೇ ತಾ॥ ತಿಂಗಳೂರು ಗ್ರಾಮ ಶಾಖೆಯು 6.9.87ರಂದು ಉದ್ಘಾಟನೆಯಾಯಿತು. ತುಮಕೂರಿನ ವಕೀಲರಾದ ಹೇಮ ಸುಧಾರೆಡ್ಡಿ, ಮಧುಗಿರಿ ತಾ॥ಸಂ ನರಸೀಯಪ್ಪ, ಸಂ॥ಸಂ ಹನುಮಯ್ಯ ಮುಖ್ಯ ಅತಿಥಿಗಳಾದ್ದರು.

ಅಲಪನಹಳ್ಳಿ

ತುಮಕೂರು ಜಿ॥ಕೊರಟಗೆರೆ ತಾ॥ ಅಲಪನಹಳ್ಳಿ ಗ್ರಾಮ ಶಾಖೆಯನ್ನು 1-8-87 ರಂದು ಉದ್ಘಾಟಿಸಲಾಯಿತು. ತಾ॥ಸಂ॥ಎಂ ಗಂಗಾಧರ್, ಕೋಲಾರ ಜಿಲ್ಲಾ ಸಂ॥ಸಂ॥ ಹ.ಮ.ರಾಮಚಂದ್ರ ಮುಖ್ಯ ಅತಿಥಿಗಳಾದ್ದರು.

ಮಂಡಲ ಶಾಖೆ ಉದ್ಘಾಟನೆ

ಕೋಲಾರಜಿಲ್ಲೆ, ಮುಳಬಾಗಲ ತಾ॥ ಮಲ್ಲನಾಯಕನಹಳ್ಳಿ ಮಂಡಲ ಶಾಖೆಯ ಕಾರ್ಯಕಾರಿ ಸಮಿತಿ ಆಯ್ಕೆಯು ಕುಪ್ಪಾಂಡಳ್ಳಿ 28.7.87ರಂದು ನಡೆಯಿತು. ಅಂದೇ ನಡೆದ ಬಹಿರಂಗ ಸಭೆಯಲ್ಲಿ ಮಂಡಲ ಶಾಖೆ ಉದ್ಘಾಟನೆಯಾಯಿತು.

ತಾ॥ಸಂ॥ ಹೆಚ್.ವಿ. ವೆಂಕಟೇಶ್, ಸಂ॥ಸಂ॥ ಹೆಚ್.ಮುನಿಚೌಡಪ್ಪ,ಎಂ ಶ್ರೀ ರಾಮಯ್ಯ, ಆವಣಿ, ಜಿ॥ ದಲಿತ ಕಲಾ ಮಂಡಲಿ ಸಂಚಾಲಕ ಪಿಚ್ಚಳ್ಳಿಶ್ರೀನಿವಾಸ್ ಭಾಗವಹಿಸಿದ್ದರು.

ಅನ್ಯವಹಾರ ಪ್ರತಿಭಟಿಸಿ ಧರಣಿ

ಪುತ್ತೂರು ಕ್ಯೊಲಾ

ದ.ಕ, ಜಿಲ್ಲೆಯ ಪುತ್ತೂರು ತಾ॥ ಕ್ಯೊಲಾ ಜಾನುವಾರು ಕ್ಷೇತ್ರದಲ್ಲಿ ಅಲ್ಲಿಯ ಅಧಿಕಾರಿಗಳು ಸರಕಾರದ ಹಣ ದುರುಪಯೋಗ ಮಾಡಿ ನೌಕರರಿಗೆ ಕಿರುಕುಳ ನೀಡುತ್ತಿದ್ದಾರೆ. ಅಲ್ಲದೆ ದಲಿತ ನೌಕರ ಎಂ. ಸಂಜೀವ ಎಂಬುವರ ಮೇಲೆ ಅಧಿಕಾರಿಗಳು ಹಲ್ಲೆ ನಡೆಸಿರುತ್ತಾರೆ. ಇದನ್ನು ಪುತ್ತೂರು. ದ.ಸಂ.ಸ ತಾಲ್ಲೂಕು ಶಾಖೆಯು 17.8.87ರಂದು ಧರಣಿಸತ್ಯಾಗ್ರಹ ನಡೆಸಿ ಪ್ರತಿಭಟಿಸಿತು. ಸರ್ಕಾರ ತಕ್ಷಣ ತನಿಖೆ ಜರುಗಿಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸಲು ಒತ್ತಾಯಿಸಿದೆ.

ವರದಿ : ಎಂ. ದೇವದಾಸ್

ನಗರೂರು ಶಾಖೆ ಉದ್ಘಾಟನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾ॥ ದಾಸನಪುರ ಹೊ॥ ನಗರೂರಿನಲ್ಲಿ ದ.ಸಂ.ಸ ಗ್ರಾಮಸಭೆ ಸೆಪ್ಟಂಬರ್ 13 ರಂದು ಉದ್ಘಾಟಿಸಲಾಯಿತು.

ಅಂಬೇಡ್ಕರ್ ಭಾವ ಚಿತ್ರ ಅನಾವರಣ ಮಾಡಿದ ಈ ಸಭೆಯ ಅಧ್ಯಕ್ಷತೆಯನ್ನ ಸಂಘಟನಾ ಸಂಚಾಲಕ ಎಸ್ ಸಿದ್ದಗಂಗಯ್ಯ ವಹಿಸಿದ್ದು ಅತಿಥಿಗಳಾಗಿ ಎನ್. ಮೂರ್ತಿ ಮರಿಸ್ವಾಮಿ, ಹನುಮಂತರಾಯಪ್ಪ, ಗಂಗರಾಜುಭಾರತೀಪುರ ಅವರುಭಾಗವಹಿಸಿದ್ದರು, ಭಾಷಣಕಾರರಾಗಿ ಸಂಚಾಲಕ ರಾಮಪ್ಪ ಭಾಗವಹಿಸಿದ್ದರು.

ಶೆಟ್ಟಿಹಳ್ಳಿ

ಬೆಂಗಳೂರು ಉತ್ತರ ತಾ॥ ದ.ಸಂಸ ಗ್ರಾಮ ಶಾಖೆಯನ್ನು ಶೆಟ್ಟಿ ಹಳ್ಳಿಯಲ್ಲಿ ಅಕ್ಟೋಬರ್ 25ರಂದು ಉದ್ಘಾಟಿಸಲಾತು. ಜಿಲ್ಲಾ ಕಮಿಟಿ ಆಶ್ರಯದಲ್ಲಿ ಜರುಗಿದ ಈ ಸಭೆಗೆ ನೆಲಮಂಗಲದ ರಾಮಪ್ಪ ವೆಂಕಟೇಶ್ ಮತ್ತಿತರು ಅತಿಥಿಗಳಾಗಿದ್ದರು

ರೆವಿನ್ಯೂ ಕೊಲೆ

(5ನೇ ಪುಟದಿಂದ)

ದೊರಕಿಸಬೇಕೆಂದು ಸರ್ಕಾರವನ್ನ ಒತ್ತಾಯಿಸಿದೆ, ತಾ॥ 19-8-87 ಬಸವಲಿಂಗಯ್ಯನ ಕಡೆಯುವರು "ನಮ್ಮವರನ್ನ ಜೈಲಿಗೆ ಕಳಿಸಿದ್ದಿರಾ!! ನಿಮ್ಮನ್ನ ಗುಡಿಸಲ ಸಮೇತ ಸುಡ್ತೇವೆ" ಎಂದು ಶ್ರೀಕಂಠಯ್ಯ ಮತ್ತು ಅವನ ತಾಯಿಗೆ ಬೆದರಿಕೆ ಹಾಕಿದಬ ಗ್ಗೆಯೂ ದೂರಿತ್ತಿದ್ದಾರೆ.

ಈ ವಿವಾದದಲ್ಲಿ ಆಶ್ಚರ್ಯ, ದುರಂತವೆಂದರೆ ಪೊಲೀಸ್ ಇಲಾಖೆಗೆ ವಿವಾದ ಗೊತ್ತಿದ್ದರೂ ಕೊಲೆಯಾಗಿದೆ ಮತ್ತು ನರಸಿಂಹಯ್ಯನ ವಿರೋಧವಾಗಿ ಸುಳ್ಳು ದಾಖಲೆ ಸೃಷ್ಠಿಸಿದ ಭ್ರಷ್ಟ ಅಧಿಕಾರಿಗಳು ಇನ್ನೂ ಗುಬ್ಬಿ ತಹಸಿಲ್ದಾರ್ ಕ್ಷೇತ್ರದಲ್ಲೇ ಬೀಡುಬಿಟ್ಟಿದ್ದಾರೆ.

ನೋವಿನಲ್ಲಿ ನರಳುವ ಜನಕ್ಕೆ ಸರ್ಕಾರ–, ಅಧಿಕಾರಿಗಳು ರಾಕ್ಷಸರಾಗೇ ಮುಂದುವರೆದು ದಲಿತರ–ಚರ-ಸ್ಥಿರ ಆಸ್ತಿಗಳನ್ನ ಲೂಟಿ ಮಾಡಿ–ಮಾಡಿಸುವ ದಳ್ಳಾಳಿಗಳಾಗುತ್ತಿದ್ದಾರೆ,

● ಅಗಳಕುಪ್ಪೆ ಸಿದ್ದಯ್ಯ

ಆಗಸ್ಟ್-14
ವಿಷಬೆರೆತ ಹೆಂಡದ ವಿರುದ್ಧ

(ಒಂದನೇ ಪುಟದಿಂದ)

ದಿವಾಳಿ ಎಬ್ಬಿಸುತ್ತಿರುವ ಕೊಲೆಗಡುಕ ನೀತಿಯನ್ನು ದ.ಸಂ.ಸ. ಕಳೆದೆರಡು ವರ್ಷಗಳಿಂದ ನಿರಂತರ ಪ್ರತಿಭಟಿಸುತ್ತಿದೆ.

1985ರ ಆಗಸ್ಟ್ 15ರಂದು ಊರಿಗೊಂದು ಹೆಂಡದ ಅಂಗಡಿ ತೆರೆಯುವುದನ್ನು ನಿಲ್ಲಿಸಿ ಹೋಬಳಿಗೊಂದು ವಸತಿ ಶಾಲೆ ತೆರೆಯಬೇಕೆಂದು ದ.ಸಂ.ಸ. ಒತ್ತಾಯಿಸಿತ್ತು. 1987ರ ಏಪ್ರಿಲ್ 14ರ ಅಂಬೇಡ್ಕರ್ ಜಯಂತಿಯಂದು ವಿಷದ ಹೆಂಡದ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ಸಲ್ಲಿಸಿತ್ತು. ದಲಿತರ ಬದುಕಿನ ಬೇರನ್ನೇ ಕೊರೆಯುತ್ತಿರುವ ವಿಷದ ಹೆಂಡ ನಿಲ್ಲದ ಹೊರತು ದಲಿತರ ಜೋಪಡಿಗಳಲ್ಲಿನ ಅಳಿದುಳಿದ ಬೆಳಕನ್ನು ಕಾಯ್ದಿಟ್ಟುಕೊಳ್ಳುವುದು ಅಸಾಧ್ಯ ಎಂಬುದು ದ.ಸಂ.ಸ. ನಿಲುವು. ಇನ್ನು ಮುಂದೆಯೂ ಹೆಂಡದ ವಿರುದ್ಧದ ಹೋರಾಟ ಸಾಗಲಿದೆ. ಆಗಸ್ಟ್ 14ರಂದು ರಾಜ್ಯಾದ್ಯಂತ ನಡೆದ ಪ್ರತಿಭಟನೆಯ ಸಂಕ್ಷಿಪ್ತ ವರದಿ ಇಲ್ಲಿದೆ.

ಬೆಂಗಳೂರು

ಮೈಸೂರು ಬ್ಯಾಂಕ್ ಚೌಕದಿಂದ ಮೆರವಣಿಗೆಯಲ್ಲಿ ಹೊರಟು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಹಾಗೂ ಗ್ರಾಮಾಂತರ ಜಿಲ್ಲಾಧಿಕಾರಿಗಳಿಗೆ ಮನವಿಗಳನ್ನೂ ಹಾಗೂ ಐದ್ನೈದು ಬಾಟ್ಲಿಗಳಲ್ಲಿ ಹೆಂಡವನ್ನು ಕಾಣಿಕೆಯಾಗಿ ಅರ್ಪಿಸಿ ಮುಖ್ಯಮಂತ್ರಿಗಳಿಗೆ ಕಳಿಸಲು ಕೇಳಲಾಯಿತು. ಎರಡು ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದ ಮೆರವಣಿಗೆಯಲ್ಲಿ ಮಹಿಳೆಯರೇ ಹೆಚ್ಚು ಇದ್ದದ್ದು ವಿಶೇಷವಾಗಿತ್ತು.

ದಕ್ಷಿಣ ಕನ್ನಡ

ಮಂಗಳೂರಿನ ಮಂಗಳಾ ಕ್ರೀಡಾಂಗಣದಿಂದ ಮೆರವಣಿಗೆ ಹೊರಟು 5 ಬಾಟ್ಲಿ ಹೆಂಡ ಹಾಗೂ ಮನವಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಕಳಿಸಲಾಯಿತು. "ಜನತಾ ಪುರಾಣ" ಎಂಬ ಬೀದಿ ನಾಟಕವನ್ನು ದಲಿತ ಕಲಾ ಮಂಡಲಿಯಿಂದ ಪ್ರದರ್ಶಿಸಲಾಯಿತು.

ಶಿವಮೊಗ್ಗ

ಜಿಲ್ಲಾ ಸಂಚಾಲಕ ರಾಚಪ್ಪ ಅವರ ನೇತೃತ್ವದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳಿಗೆ 5 ಬಾಟ್ಲಿ ಹೆಂಡ ಕೊಡಲಾಯಿತು.

ಕೋಲಾರ

ಮೂರು ಸಾವಿರಕ್ಕೂ ಹೆಚ್ಚು ಜನ ಮಧ್ಯಾಹ್ನ 3 ಗಂಟೆಗೆ ನಚಿಕೇತ ನಿಲಯದಿಂದ ಹೊರಟು ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು. ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಯವರಿಗೆ 5 ಬಾಟ್ಲಿ ಹೆಂಡ ಕಳಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಮಾಲೂರು ತಾಲ್ಲೂಕು ಸಂಚಾಲಕ ಎಂ. ತಿಮ್ಮಯ್ಯ, ಶಿಡ್ಲಘಟ್ಟ ತಾ॥ ಸಂಚಾಲಕ ಮಂಜುನಾಥ, ಚಿಂತಾಮಣಿ ತಾ॥ ಸಂ॥ ಗುಡಿಯಪ್ಪ ಮತ್ತು ಜಿಲ್ಲಾ ಸಂಚಾಲಕ ಎನ್. ಮುನಿಸ್ವಾಮಿ ಮಾತನಾಡಿದರು. ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ವಿದ್ಯಾರ್ಥಿಗಳು, ಮಹಿಳೆಯರು, ಹಾಗೂ ರೈತ ಕಾರ್ಮಿಕರು ಭಾಗವಹಿಸಿದ್ದರು.

ರಾಯಚೂರು

ಡಾ॥ ಅಂಬೇಡ್ಕರ್ ವಿದ್ಯಾರ್ಥಿನಿಲಯದಲ್ಲಿ ಹಳ್ಳಿಗಾಡಿನಿಂದ ಎರಡು ಸಾವಿರಕ್ಕೂ ಹೆಚ್ಚು ದಲಿತರು ಬಂದು ಸೇರಿದ್ದರು. ಮಧ್ಯಾಹ್ನ 12ಕ್ಕೆ ಹೊರಟ ಮೆರವಣಿಗೆ ನಗರದ ಸ್ಟೇಷನ್ ರಸ್ತೆಯಿಂದ ಹಾದು, ಬಸ್ಸು ನಿಲ್ದಾಣ, ಮೇನ್ ಬಜಾರ್ ಮುಖಾಂತರ ಪಾಟೀಲ ರಸ್ತೆ, ಮೌಳೇಶ್ವರ ಚೌಕ ಹಾದು ಸುರಿವ ಮಳೆಯನ್ನು ಲೆಕ್ಕಿಸದೆ ಜಿಲ್ಲಾಧಿಕಾರಿಗಳ ಕಛೇರಿ ತಲುಪಿದರು. ಜಿ॥ಸಂ॥ ಹನುಮದಾಸ ಮಾತಾಡಿ ಹೆಂಡದಿಂದ ದಲಿತರ ಆರೋಗ್ಯ ಹಾಗೂ ಪ್ರಾಣ ಉಳಿಸಲು ಹೇಳಿದರು. ಬಿ.ಆರ್. ಹಿರೇ ನಾಗೂರ್ ಮಾತನಾಡಿ ಕುಡಿತದಿಂದ ದಲಿತರು ಪ್ರಾಣ ಕಳೆದುಕೊಳ್ಳುತ್ತಿರುವುದರಿಂದ ಎಷ್ಟೋ ಜನ ಹೆಣ್ಣು ಮಕ್ಕಳು ವಿಧವೆಯರಾಗಿದ್ದಾರೆ. ಇಂತಹ ಗಂಭೀರ ಸಮಸ್ಯೆಯನ್ನು ಪರಿಹರಿಸಲು ಒತ್ತಾಯಿಸಿದರು. ಜಿ॥ಸಂ॥ಸಂ॥ ಆರ್. ಮಾನ್ಸಯ್ಯ ದಲಿತ ಮಕ್ಕಳಿಗೆ ಕನಿಷ್ಠ ವಿದ್ಯೆಯನ್ನಾದರೂ ಕೊಡಿ ಎಂದರು. ಜಿಲ್ಲಾಧಿಕಾರಿಗಳ ಪರವಾಗಿ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಶ್ಯಾಂರಾವ್ ಮನವಿ ಹಾಗೂ 5 ಬಾಟ್ಲಿ ಹೆಂಡವನ್ನು ಸ್ವೀಕರಿಸಿದರು.

ಗುಲ್ಬರ್ಗ

ಕೋರ್ಟು ಬಳಿ ಇರುವ ದೊಡ್ಡಬೇವಿನ ಮರದ ಕೆಳಗೆ ಬೆಳಿಗ್ಗೆಯೇ ಸೇರಿದ್ದ ಜನ ಇಂದಿರಾನಗರ, ಸಿದ್ಧಾರ್ಥನಗರ ಹಾಸ್ಟೆಲುಗಳಿಂದ ಮತ್ತು ಇತರ ತಾಲ್ಲೂಕುಗಳಿಂದಲೂ ಬಂದಿದ್ದರು. ಶಹಾಬಾದದಿಂದ ಹೆಚ್ಚು ಕಾರ್ಯಕರ್ತರು ಬಂದಿದ್ದರು. ವಿಶೇಷವಾಗಿ ನಿರ್ಮಿಸಿದ್ದ ಹೋಲಿಕೆಯಲ್ಲಿ 5 ಬಾಟ್ಲಿ ಹೆಂಡವನ್ನು, ಸೆಳ್ಳಗೆ ದೇವೀಂದ್ರ, ಜಿ. ಬಸವಲಿಂಗಪ್ಪ ಹಾಗೂ ಇನ್ನಿಬ್ಬರು ಗೆಳೆಯರು ಹೊತ್ತಿದ್ದರು. ಮೆರವಣಿಗೆ ತಿಮ್ಮಾಪುರ ಚೌಕ, ಕೆ.ಇ.ಬಿ ಕಚೇರಿ ಎದುರು ಮುಖ್ಯ ರಸ್ತೆ, ಡಾ॥ ಅಂಬೇಡ್ಕರ್ ಚೌಕ, ಸೂಪರ್ ಮಾರ್ಕೆಟ್ ಹೂವಿನ ಅಂಗಡಿ, ಹಾದು ಜಿಲ್ಲಾಧಿಕಾರಿ ಕಚೇರಿ ತಲುಪಿದರು. ಡಿ.ಜಿ. ಸಾಗರ್ ಬಸಣ್ಣ ಸಿಂಗೆ ಮಾತಾಡಿ ಸರ್ಕಾರ ನೀತಿ ಖಂಡಿಸಿದರು, ಜಿ॥ಸಂ॥ ಜಿ.ಕೆ. ಗೋಖಲೆ ಮಾತಾಡಿ ಸರ್ಕಾರ ತನ್ನ ನೀತಿ ಬದಲಿಸದಿದ್ದರೆ ಹೋರಾಟದ ಮಜಲುಗಳನ್ನು ಸರ್ಕಾರ ಕಾಣಬೇಕಾಗುವುದೆಂದು ಎಚ್ಚರಿಸಿದರು. ಜಿಲ್ಲಾಧಿಕಾರಿ ಜ್ಯೋತಿರ್ ರಾಮಲಿಂಗಮ್ ಅವರು ಮೆರವಣಿಗೆಕಾರರ ಬಳಿ ಬಂದು ಮನವಿ ಮತ್ತು ಪ್ಯಾಕ್ ಮಾಡಿದ 5 ಬಾಟ್ಲಿ ಹೆಂಡ ಸ್ವೀಕರಿಸಿ, ಮುಖ್ಯಮಂತ್ರಿಗಳಿಗೆ ಕಳಿಸುವುದಾಗಿ ಹೇಳಿದರು.

ಮೈಸೂರು

ಪ್ರತಿಭಟನಾ ಮೆರವಣಿಗೆಯೊಂದಿಗೆ ಮನವಿ ಹಾಗೂ 5ಬಾಟ್ಲಿಹೆಂಡವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಲಾಯಿತು. ನಂತರ ಪುರಭವನದಲ್ಲಿ ಜಿ॥ಸಂ॥ ಹರಿಹರಾನಂದಸ್ವಾಮಿ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಭೆಯಲ್ಲಿದ್ದವರೆಲ್ಲ "ಮದ್ಯಪಾನ ಮಾಡುವುದಿಲ್ಲ"ವೆಂದು ಪ್ರತಿಜ್ಞೆ ಸ್ವೀಕರಿಸಿದರು. ಕೆ. ಮಹದೇವ ಸ್ವಾಗತಿಸಿದರು.

ಮುಖ್ಯ ಅತಿಥಿಗಳಾದ ಬಿ.ಆರ್. ಪ್ರಾಣೇಶರಾವ್, ಕುಪ್ಪೆ ನಾಗರಾಜ್, ರೈತಸಂಘದ ಪ್ರತಿನಿಧಿ ಕೆ. ಗಂಗಾಧರ್ ಮಾತನಾಡಿದರು. ಪಾನನಿರೋಧ ಜಾರಿಗೆ ತರಬೇಕೆಂದು ಸಭೆ ಒತ್ತಾಯಿಸಿತು. ನಂಜುಂಡಮೂರ್ತಿ ವಂದಿಸಿದರು.

ಚಿಕ್ಕಮಗಳೂರು

ಬೃಹತ್ ಮೆರವಣಿಗೆ ನಡೆಸಿ 5 ಬಾಟ್ಲಿ ಹೆಂಡವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು. ಆಜಾದ್ ಪಾರ್ಕಿನಲ್ಲಿ ಬಹಿರಂಗ ಸಭೆ ನಡೆಯಿತು. ದ.ಸಂ.ಸ. ರಾಜ್ಯ ಸಂಘಟನಾ ಸಂಚಾಲಕ ಎಂ.ಡಿ. ಗಂಗಯ್ಯ, ರೈತ ಮುಖಂಡ ಹೆಚ್.ಡಿ. ದೇವರಾಜ್, ಧೃವ ನಾರಾಯಣ್ ಮಾತನಾಡಿದರು.

ಹಾಸನ

ಸುಮಾರು 2ಸಾವಿರ ಜನ ಮಹಿಳೆಯರೂ ಸೇರಿದಂತೆ ದ.ಸಂ.ಸ. ಕಾರ್ಯಕರ್ತರು ಮೆರವಣಿಗೆಯಲ್ಲಿ ಹೊರಟು 5ಬಾಟ್ಲಿ ಹೆಂಡವನ್ನು ಜಿಲ್ಲಾಧಿಕಾರಿಗಳಿಗೆ ಅರ್ಪಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ "ಹೆಂಡ ಕುಡಿಯುವುದಿಲ್ಲ"ವೆಂದೂ "ತಮ್ಮ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳಿಸುತ್ತೇವೆ" ಎಂದೂ ಪ್ರತಿಜ್ಞೆ ಸ್ವೀಕರಿಸಿದರು. ಸಂಚಾಲಕ ಕೆರಗೋಡು ಪ್ರಸಾದ್, ರೈತಸಂಘದ ಪುಟ್ಟಣ್ಣಯ್ಯ ಮಾತನಾಡಿದರು.

ಮಂಡ್ಯ

ದ.ಸಂ.ಸ. ಕಾರ್ಯಕರ್ತರು 5 ಬಾಟ್ಲಿಗಳಲ್ಲಿ ಹೆಂಡವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಿ ಜಿಲ್ಲಾಧಿಕಾರಿಗಳಿಗೆ ಮನವಿಯೊಂದಿಗೆ ಕೊಟ್ಟು ಮುಖ್ಯಮಂತ್ರಿಗಳಿಗೆ ಕಳಿಸಲು ಒತ್ತಾಯಿಸಿದರು.

ತುಮಕೂರು

ಬೆಳಿಗ್ಗೆ 10ಗಂಟೆಗೆ ಎ.ಕೆ. ಬೋರ್ಡಿಂಗ್ ಹೋಂ ಮೈದಾನದಿಂದ ಹೊರಟ ಮೂರುಸಾವಿರಕ್ಕೂ ಹೆಚ್ಚು ಜನರ ಮೆರವಣಿಗೆ, ಬಿ.ಹೆಚ್.ರಸ್ತೆ, ಬಾರ್ ಲೈನ್, ಎಂ.ಜಿ. ರಸ್ತೆ, ಟೌನ್‌ಹಾಲ್ ಸರ್ಕಲ್, ಅಶೋಕ ರಸ್ತೆ, ಸ್ವತಂತ್ರ ಚೌಕದಿಂದ ಡಿ.ಸಿ. ಕಚೇರಿ ತಲುಪಿದರು. ಜಿ॥ಸಂ॥ಸ॥ ನರಸಿಂಹರಾಜ, ನರಸೀಯಪ್ಪ, ನಗರ ಸಂಚಾಲಕ ಟಿ.ಎಚ್. ಶಿವಕುಮಾರ್ ಮೆರವಣಿಗೆ ನೇತೃತ್ವ ವಹಿಸಿದ್ದರು. ನರಸಿಂಹಯ್ಯ ಮಾತನಾಡಿದರು. ಜನತೆಯನ್ನು ವಿದ್ಯೆಯ ಮೂಲಕ ಜಾಗೃತಗೊಳಿಸಬೇಕಾಗಿರುವ ಸರ್ಕಾರ ಕ್ಲೋರಾಲ್ ಹೈಡ್ರೇಟ್ ಬೆರೆಸಿರುವ ವಿಷದ ಹೆಂಡ, ಸಾರಾಯಿ ಸರಬರಾಜು ಮಾಡಿ ಅವರನ್ನು ಮತ್ತಿನಲ್ಲಿರಿಸಿ, ಅವರು ಬೆವರು ಸುರಿಸಿ ಗಳಿಸಿದ ಕೂಲಿಯನ್ನು ದೋಚಿಕೊಂಡು ಮೋಜು ಮಾಡುವುದನ್ನು ವಿರೋಧಿಸಿದರು. ಜಿಲ್ಲಾಧಿಕಾರಿಗಳ ಗೈರು ಹಾಜರಿಯಲ್ಲಿ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಸುಭಾಷ್ ಕುದುರೆಮೋತಿಯವರು ಮನವಿ ಸ್ವೀಕರಿಸಿದರು. ಅವರೊಟ್ಟಿಗಿದ್ದ ಅಬ್ಕಾರಿ ಸೂಪರಿಂಟೆಂಡೆಂಟ್ ವೆಂಕಟಸ್ವಾಮಯ್ಯನವರು 5 ಬಾಟ್ಲಿ ಹೆಂಡ ಸ್ವೀಕರಿಸಿದರು.

ಚಿತ್ರದುರ್ಗ, ಬೆಳಗಾಂ, ಕೊಡಗು, ಧಾರವಾಡ ಜಿಲ್ಲೆಗಳಿಂದ ಕಾರ್ಯಕ್ರಮದ ವರದಿಗಳು ಬಂದಿಲ್ಲ.

ಮೆದಿಕಿನಾಳ ನಡೆದುಬಂದ ದಾರಿ

(ಒಂದನೇ ಪುಟದಿಂದ)

ಸ್ಥಳೀಯ ಮೇಲು ಜಾತಿಯ ಭೂಮಾಲೀಕರು ದಲಿತರ ಹೋರಾಟವನ್ನು ವಿರೋಧಿಸುತ್ತಲೇ ಬಂದು, ಮಹೇಂದ್ರಬಾಬು ಈತನ ತಮ್ಮ ಲಿಂಗರಾಜುನಾಡಗೌಡ ಮೆದಿಕಿನಾಳ ಮಂಡಲ ಪ್ರಧಾನರು ಮತ್ತೊಬ್ಬ ಮಠಾಧಿಪತಿ ರುದ್ರಮುನಿಸ್ವಾಮಿ ದಲಿತರಿಗೆ ಭೂಮಿ ದಕ್ಕಿದ್ದು, ತಿಳಿದ ಕೂಡಲೇ ಜಾತಿಯ ಭೂತ ಎಬ್ಬಿಸಿ, ದಲಿತರ ಮೇಲೆ ಜನರನ್ನು ಎತ್ತಿ ಕಟ್ಟಿದರು, ಅಂಗಡಿ, ಗಿರಣಿ, ಚಹದ ಹೋಟೆಲ್, ಕುಡಿಯುವ ನೀರಿಗೆ, ಸಾರಿಗೆ ಬಸ್ಸಿಗೆ, ಕೆಲಸಗಳಿಗೆ ಮುಂತಾದವುಗಳಿಗೆ ಪ್ರವೇಶ ನಿರೋಧಿಸಿದರು. ಊರು ಒಳಕ್ಕೆ ಹೋಗದಂತೆ ಕೂಡಾ ನಿಷೇಧಿಸಿದರು, ಮಾತನಾಡಿದರೆ ರೂ. 500 ದಂಡ ಎಂದು ಸುಮಾರು 500 ಕುಟುಂಬಗಳ ಬಡದಲಿತರಿಗೆ ನಿರಂತರ ಒಂದು ತಿಂಗಳ ಕಾಲ ಸಾಮಾಜಿಕ ಬಹಿಷ್ಕಾರ ಹಾಕಿ, ನಂತರ ದಿನಾಂಕ 30-5-1987 ರಂದು ಪ್ರಚೋದಿತ ಜಾತಿ ದಂಡು, ದಲಿತರ ಕೇರಿಗೆ ನುಗ್ಗಿ 8 ಗುಡಿಸಲುಗಳನ್ನು ಸುಟ್ಟರು. ದಣಿಗಳ ದೌರ್ಜನ್ಯದಿಂದ ವಿಚಿತ್ರ ಯಾತನೆಯನ್ನು ಅನುಭವಿಸುತ್ತಿದ್ದರು. ದಲಿತರು ದಲಿತ ಸಂಘರ್ಷ ಸಮಿತಿ ಬಾವುಟ ಹಿಡಿದು ಸಂಘಟಿತರಾಗಿ ತಮ್ಮ ಬದುಕಿನಲ್ಲಿ ಸ್ವಾಭಿಮಾನ ಕಂಡು ಬಿಟ್ಟಿ ಚಾಕರಿಗಳಾದ ಹೆಣ ಧಪನ್ ಮಾಡುವುದು, ಪುಕ್ಕಟ್ಟೆ ಬಟ್ಟೆಹೆಣೆದು ಕೊಡುವುದು, ಸತ್ತ ದನ ಸುಲಿದು ಚಪ್ಪಲಿ ಮಾಡುವುದು, ಮಾಂಸಲಿಡುವುದು, ಊರು ಕಸಗುಡಿಸಿ, ಎತ್ತಿ ಹಾಕಿಸಿಕೊಂಡು ತಿನ್ನುವುದು. ಮುಂತಾದವುಗಳಿಗಾಗಿ ನಾವು ಹುಟಿದವರಲ್ಲ ಎಂದು ಈ ನೌಕರಿ ಫಲರಹಿತ ಅವಮಾನಿತ ಕೆಲಸಗಳನ್ನು ಬಹಿಷ್ಕರಿಸಿದರು.

ಇದಕ್ಕೂ ಮುಂಚೆ ಕಳೆದ ಬಾರಿ 1984ರಲ್ಲಿ ಮಹೇಂದ್ರಬಾಬು ತಮ್ಮ ಬಸವರಾಜು ಗುಡಿಸಲುಗಳನ್ನು ಸುಟ್ಟ ಪ್ರಕರಣ ಪೊಲೀಸ್ ಸಮಕ್ಷಮ ಸುಟ್ಟು ಯಾವುದೇ ಕಾನೂನಿಗೆ ಸಿಗದೇ ಹಣದ ಬಲದಿಂದ ಕಾನೂನಿನ ಕಣ್ಣಿಗೆ ಮಣ್ಣೆರಚಿ ಈ ವ್ಯಕ್ತಿ ತಪ್ಪಿಸಿಕೊಂಡನು.

ದಲಿತರು ಭೂಮಿಗಾಗಿ ಸತತವಾಗಿ ದಂಗೆಯೆದ್ದು ತಮ್ಮ ಬದುಕಿನೊಂದಿಗೆ ಹೋರಾಟಕ್ಕೆ ಮುಂದಾಗುತ್ತಾರೆ, ಸುಮಾರು ವರ್ಷಗಳ ಕಾಲ ಕಣ್ಣೀರು ಸುರಿಸುತ್ತ ದುಃಖದೊಂದಿಗೆ ತಿನ್ನುವ ತುತ್ತನ್ನು ಒತ್ತೆ ಇಟ್ಟು ಕೊನೆಗೆ ತಮ್ಮ ನಿರಂತರ ಹೋರಾಟದ ಫಲವನ್ನು ಜಯದ ಮೂಲಕ ಕಂಡಿದ್ದರು. ನಂತರ ದಲಿತರಿಗೆ ಭೂಮಿ ದಕ್ಕಿದ ವಿಷಯ ತಿಳಿದ ತಕ್ಷಣವೇ ಮೆದಿಕಿನಾಳದ ನವ ನಾಗರೀಕ ಸಮಿತಿ ಎಂಬ ಸಂಘವನ್ನು ಮಹೇಂದ್ರಬಾಬು ಪಾಳೇಗಾರಿಕೆಗಾಗಿ ಸ್ಥಾಪಿಸಿಕೊಂಡು ದಲಿತರ ಮೇಲೆ ದಬ್ಬಾಳಿಕೆ ಮಾಡುತ್ತಾ ದಲಿತರ ಭೂಮಿ ಕಬಳಿಸುವ ಕುತಂತ್ರ ಮಾಡುತ್ತಾ ದಲಿತರ ಮೇಲೆ ದ್ವೇಷದ ಉದ್ವೇಗದಿಂದ ರಾಜ್ಯದ ನ್ಯಾಯಾಲಯಕ್ಕೆ ರೀಟ ಅರ್ಜಿಯನ್ನುಸಲ್ಲಿಸಿ ಕೋರ್ಟ್‌ನಿಂದ ತಡೆಯಾಜ್ಞೆ ತಂದರು.

ಆಗ ದಲಿತರು ತಮಗೆ ಆಗಿರುವ ಅನ್ಯಾಯವನ್ನು (ನೋವನ್ನು) ದಿನಾಂಕ : 2–7–87ರಂದು ಸರ್ಕಾರದ ನೀತಿಯನ್ನು ಖಂಡಿಸಿ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗಿರುವವರಿಗೆ ಕಾಮಗಾರಿಕೆ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯ ನಿರ್ವಹಿಸುವಂತೆ ಹಾಗೂ ಗುಡಿಸಲು ಸುಟ್ಟ ದಲಿತರಿಗೆ ಪುನರ್‌ವಸತಿ ನೀಡುವಂತೆ ಹಾಗೂ ಭೂಮಿ ಮೇಲೆ ಇರುವ ತಡೆಯಾಜ್ಞೆ ತೆರವು ಮಾಡುವಂತೆ ಒತ್ತಾಯಿಸಿ ರಾಜ್ಯಾದ್ಯಂತ ಒಂದು ದಿವಸ ಸಾಂಕೇತಿಕ ಧರಣಿ ಸತ್ಯಾಗ್ರಹ ಕಾರ್ಯಕ್ರಮದಿಂದ ಸರ್ಕಾರಕ್ಕೆ ಸವಾಲು ಮಾಡಿದರು.

ರಾಯಚೂರು ಜಿಲ್ಲೆಯ ಮೆದಿಕಿನಾಳ ಗ್ರಾಮದ ದಲಿತರ ಮತ್ತು ಮೇಲು ಜಾತಿಯ ಜನರ ಹಾಗೂ ಭೂಮಾಲೀಕರ ಮಧ್ಯೆ ಇರುವ ಭೂ ವಿವಾದ ಇದೀಗ ಇತ್ಯರ್ಥಗೊಂಡಿದೆ. ಈ ಭೂ ವಿವಾದಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯ ಎಲ್ಲಾ ಎಂ.ಎಲ್.ಎ. ಗಳು ಮತ್ತು ಮೆದಿಕಿನಾಳದ ದಲಿತರು ಭೂಮಾಲೀಕರು ಮೇಲು ಜಾತಿಯ ರೈತರು ಹಾಗೂ ದಲಿತ ಸಂಘರ್ಷ ಸಮಿತಿಯ ನಾಯಕರು ಮತ್ತು ಕಾರ್ಯಕರ್ತರು ದಿನಾಂಕ 9-8-87 ರಂದು ಸಂಜೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ನಡೆದ ಶಾಂತಿ ಸಭೆಯಲ್ಲಿ ಎಲ್ಲರೂ ಭಾಗವಹಿಸಿ ಮೆದಿಕಿನಾಳ ಭೂ ವಿವಾದ ಕುರಿತು ಅಂತಿಮ ತೀರ್ಮಾನ ಕೈಗೊಂಡರು.

ಮೆದಿಕಿನಾಳ ಕೆರೆ ಅಂಗಳ ಸರ್ವೆ ನಂ. 74:1, 74:2, 75, 67 ಎಕರೆ 38 ಗುಂಟೆ ಇದ್ದು ಈ ಭೂಮಿಯನ್ನು ಸರ್ಕಾರ ಭೂಹೀನ 17 ದಲಿತ ಕುಟುಂಬದವರಿಗೆ ತಲಾ ನಾಲ್ಕು ಎಕರೆ ಮಂಜೂರು ಮಾಡಿತ್ತು. ಈಗ ಒಪ್ಪಂದದ ಪ್ರಕಾರ 17 ದಲಿತ ಕುಟುಂಬದವರು ತಮಗೆ ಮಂಜೂರಾತಿ ನೀಡಿದ ಭೂಮಿಯಲ್ಲೆ ತಲಾ ಒಂದು ಎಕರೆಯಂತೆ ಭೂಮಿ ನೀಡಲು ಮನಸ್ಸು ಪೂರ್ತಿಯಾಗಿ ಒಪ್ಪಿಕೊಂಡಿದ್ದಾರೆ. ಇದು 16 ಎಕರೆ 37 ಗುಂಟೆ ಆಗುತ್ತದೆ.

ಈ ಭೂಮಿ ಹಂಚುವ ಅಧಿಕಾರ ಜಿಲ್ಲಾಧಿಕಾರಿಗಳಿಗಿದ್ದು ಶೀಘ್ರದಲ್ಲೇ ಅದನ್ನು ಹಂಚುವ ಕಾರ್ಯ ಚಟುವಟಿಕೆಗೆ ಮುಂದುವರೆದಿದೆ. ಜೊತೆಗೆ ಬೆಂಕಿಯ ದುರಂತಕ್ಕೆ ಒಳಗಾಗಿರುವ ದಲಿತರಿಗೆ ಪುನರ್‌ವಸತಿ ಕೃಷಿ ಅಭಿವೃದ್ಧಿಯನ್ನು ಸರ್ಕಾರ ಒದಗಿಸುವಂತೆ ಸಭೆಯಲ್ಲಿ ಮಾತುಕತೆ ನಡೆಯಿತು ಭೂಮಿಯನ್ನು ಭೂಹೀನರಿಗೆ ಮಂಜೂರಾತಿ ನೀಡಿತ್ತು. ಈ ಭೂಹಂಚಿಕೆ ವಿರುದ್ಧ ಮೇಲು ಜಾತಿಯ ಜನರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

ಅದೇ ರೀತಿಯಲ್ಲಿ ಇದಕ್ಕೆ ಸಂಬಂಧಿಸಿದಂತೆ ಪೊಲೀಸ್ ಮೊಕದ್ದಮೆಗಳನ್ನು ಕೂಡ ಹಿಂತೆಗೆದುಕೊಳ್ಳಲಾಗುವುದು.

ಜೊತೆಯಲ್ಲೆ ಜಾತಿ ವೈಷಮ್ಯ ಭಾವನೆಗಳನ್ನು ಕೊನೆಗೊಳಿಸುವಂತೆ ಶಾಂತಿ ಸಭೆಯಲ್ಲೆ ತೀರ್ಮಾನಿಸಲಾಗಿದೆ.

ತೆರೆದ ಅಂಚೆ

ಇವರಿಗೆ

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಹಳ್ಳಿ, ಬೆಂಗಳೂರು-40
ಮುದ್ರಣ : ಪೃಥ್ವಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-49